12. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸ:ಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಅಶೋಕ ಖೇಣಿ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ,Governor Address ನಲ್ಲಿ Governor ರವರು ಹೇಳುತ್ತಾರೆ, we need to regain the lost glory and pride of Karnataka as a State that recognizes and respects social and cultural diversity. ನನಗೆ English ನವರು ಯಾರೋ ಒಬ್ಬರು ಹೇಳಿದ್ದರು, The greatness of a nation or a state is not is cheoked by how rich and how powerful they are. But how they take care of poor, support the destitute, protect the weak and provide justice to the socially discriminated. That is the greatness of any state.

(ಈ ಹಂತದಲ್ಲಿ ಡಾ: ಎ.ಬಿ. ಮಾಲಕರೆಡ್ಡಿಯವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)ಹಾಗೆ conditions ನೋಡಿದರೆ ನಮ್ಮ state is still great state, though we lost and suffered in terms of investment. ನಾನು ಒಂದು ಕಡೆ ಓದಿದ್ದೆ. ಯಾವಾಗ ಬ್ರಿಟಿಷರು ನಮಗೆ ಸ್ವಾತಂತ್ರ್ಯ ಕೊಟ್ಟು ದೇಶ ಬಿಟ್ಟು ಹೋಗುತ್ತಿದ್ದರು, ಆ ಸಂದರ್ಭದಲ್ಲಿ ಬ್ರಿಟಿಷರು, ನೆಹರೂಜಿ, ಮಹಾತ್ಮ ಗಾಂಧೀಜಿ ಎಲ್ಲರೂ ಸೇರಿ ಒಂದು ಪಾರ್ಟಿ ಮಾಡಿದರು. ಆ function ನಲ್ಲಿ ಒಬ್ಬರು British lady ನೆಹರೂ ರವರಿಗೆ ನೆಹರೂಜಿ, ನಾವು ಬ್ರಿಟಿಷರು ನಿಮಗೆ suit ಹಾಕುವುದಕ್ಕೆ ಕಲಿಸಿದ್ದೇವೆ, ಇಂಗ್ಲೀಷ್ ಭಾಷೆ ಕೊಟ್ಟಿದ್ದೇವೆ, Railways ಕೊಟ್ಟಿದ್ದೇವೆ, roads ಕೊಟ್ಟಿದೇವೆ, ನಿಮಗೆ education – ಕೊಟ್ಟಿದ್ದೇವೆ, ತಮಗೆ Electricity ಕೊಟ್ಟಿದ್ದೇವೆ, ನಾವು ಇಷ್ಟೆಲ್ಲ ಮಾಡಿದರೂ ನಮ್ಮನ್ನು ಏಕೆ ಕಳುಹಿಸುತ್ತಿದ್ದೀರಿ? ಎಂದು ಕೇಳಿದರು. ನೆಹರೂರವರು – ಹೌದು ಮೇಡಂ ತಾವು ಹೇಳಿರುವುದು correct ಇದೆ. ಅವೆಲ್ಲವನ್ನು ನೀವು ಮಹಾರಾಜರಿಗೆ, ರಾಜರಿಗೆ, ಜಮೀನ್ದಾರರಿಗೆ ಶ್ರೀಮಂತರಿಗೆ ಕೊಟ್ಟಿದ್ದೀರಿ. ಆದರೆ ನಮ್ಮ ಇಚ್ಛೆ ಏನಿದೆ ಎಂದರೆ, ಸ್ವಾತಂತ್ರ್ಯ ಬಂದ ನಂತರ ನಮ್ಮ road, electricity, school, health facilities, drinking

water, ಮನೆ ಈ ರೀತಿ ಎಲ್ಲವನ್ನು ರೈತರಿಗೆ ಮತ್ತು ಹಳ್ಳಿಯವರಿಗೆ ಕೊಡುವುದು? ಎಂದು ಹೇಳಿದರಂತೆ. ನಮಗೆ ಸ್ವಾತಂತ್ರ್ಯ ಬಂದು 67 ವರ್ಷ ಕಳೆದರೂ ಸಹ ನಮಗೆ ಯಾವುದೇ ಒಳ್ಳೆಯ ರಸ್ತೆ ಕಾಣುತ್ತಿಲ್ಲ. ಕುಡಿಯುವುದಕ್ಕೆ ನೀರು ಕಾಣುತ್ತಿಲ್ಲ. ನನ್ನ ಕ್ಷೇತ್ರವಾದ ಬೀದರ್ ದಕ್ಷಿಣದಲ್ಲಿ ದಿವಸಕ್ಕೆ 3 ಗಂಟೆ ಮಾತ್ರ ಕರೆಂಟ್ ಕೊಡುತ್ತಿದ್ದಾರೆ. ಬೆಂಗಳೂರಿನಲ್ಲಿ 24 ತಾಸು ಕರೆಂಟ್ ಕೊಡುತ್ತಿದ್ದಾರೆ, ಇರಲಿ, ಬೆಂಗಳೂರು ಜನರಿಗೆ ಜಾಸ್ತಿ ಕರೆಂಟ್ ಬೇಕು. ಹಾಗೆಯೇ ನನ್ನ ಕ್ಷೇತ್ರದಲ್ಲಿ ಸರಿಯಾದ school ಇಲ್ಲ. school ಇದ್ದರೂ roof leak ಇದೆ. Health facilities ಇಲ್ಲ. ಬೀದರ್ ದಕ್ಷಿಣದಲ್ಲಿ ಸರಿಯಾದ ಒಂದೂ hospital ಇಲ್ಲ. ನಮ್ಮ ಬೀದರ್ ದಕ್ಷಣ ಕ್ಷೇತ್ರ 100 ಕಿಲೋ ಮೀಟರ್ ಉದ್ದ ಇದೆ, 60 ಕಿಲೋ ಮೀಟರ್ ಅಗಲ ಇದೆ. ಆದರೆ, ಅಲ್ಲಿ ಒಂದೂ hospital ಇಲ್ಲ.

ಛೇರ್‌ಮನ್ : ಯಾವ ಆಸ್ಪತ್ರೆ ನಿಮಗೆ ಬೇಕು.?

ಶ್ರೀ ಅಶೋಕ್ ಖೇಣಿ : ನಮ್ಮಲ್ಲಿ emergency operation ಮಾಡುವುದು, ಅತ್ಯಾಧುನಿಕ ವ್ಯವಸ್ಥೆಯಳ್ಳ ಯಾವುದೇ ಆಸ್ಪತ್ರೆ ಇಲ್ಲ.

ಛೇರ್‌ಮನ್ : Community Health Centre ಇಲ್ಲವೇ?

ಶ್ರೀ ಅಶೋಕ್ ಖೇಣಿ : Primary Health Centre (PHC) ಎಂದು ಇದೆ.ಆದರೆ ಅಲ್ಲಿ ಡಾಕ್ಟರ್ಸ್ ಇಲ್ಲ, ನಾನು Health Officers ಜೊತೆ ಮೀಟಿಂಗ್ ಮಾಡಿದಾಗ ಅವರನ್ನು ನಿಜವಾಗಿ ಹೇಳಿ ನಿಮ್ಮ ಮಕ್ಕಳು ಅನಾರೋಗ್ಯಪೀಡಿತರಾದರೆ ಇದೇ ಆಸ್ಪತ್ರೆಗೆ ಕರೆದುಕೊಂಡು ಹೋಗುವಿರಾ ಅಂದಾಗ ಅವರು, ಇಲ್ಲ ನಮ್ಮ ಮಕ್ಕಳು ಅಲ್ಲಿಗೆ ಹೋದರೆ ಸತ್ತು ಹೋಗುತ್ತಾರೆ ಎಂದು ಹೇಳಿದರು. ಅಂಥ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯಲ್ಲಿ ಒಂದು ಚೆನ್ನಾಗಿರುವ ಟೆಕ್ನಿಕಲ್ ಕಾಲೇಜು ಇಲ್ಲ. ಈಗ ಏನಾಗುತ್ತದೆ, ಆಕ್ಸಿಡೆಂಟ್ ಆದರೆ patients ಅನ್ನು ಬೀದರ್‌ಗೆ ಕರೆದುಕೊಂಡು ಹೋಗಲಿಕ್ಕೆ ರೋಡ್ಸ್ ಚೆನ್ನಾಗಿಲ್ಲ. ಹಾಗಾಗಿ ನಮ್ಮ ಜಿಲ್ಲೆಯಲ್ಲಿ ಬಹಳಷ್ಟು problems ಇವೆ. ನೀರು, ಕರೆಂಟ್ ಸಮಸ್ಯೆಗಳಿವೆ, ನಮಗೆ ಶಾಲೆಗಳು ಇಲ್ಲ, Health facilities ಇಲ್ಲ. ಅದಕ್ಕೆ ನಾನು Governor's speech ನೋಡಿದೆ, ಅದರಲ್ಲಿ ಅವರು ಹೇಳುತ್ತಾರೆ My Government is committed to safeguarding the

constitutional and legal rights of SC and ST People, ensuring equal opportunities for all disadvantaged groups and weaker sections, especially in access to health and nutrition, education and employment.' ನನ್ನ ವಿಚಾರದಲ್ಲಿ this applies to all. ನಮ್ಮ ಜಿಲ್ಲೆಯಲ್ಲಿ ಮೂರು ಲಕ್ಷ ಜನರಿದ್ದಾರೆ they are all disadvantaged. ಅದರಲ್ಲಿ health facilities nutrition ಇಲ್ಲ, Though many of them are not actually scheduled castes and scheduled Tribes, Scheduled Caste and Schaduled Tribe population is only 36% but rest of them same discrimination ಆಗಿದೆ. ಅದಕ್ಕೆ ಜಾಸ್ತಿ help ಬೇಕು. ನಾನು ಸದಸ್ಯನಾಗಿ join ಆದಾಗ ಮೊದಲಿಗೆ ನನ್ನನ್ನು ಕರೆದುಕೊಂಡು ಹೋಗಿ ಎಂ.ಎಲ್.ಎ. ಆಗಿದ್ದರಿಂದ ಎಲ್ಲರೂ ನನ್ನ ಹತ್ತಿರ ಚೆನ್ನಾಗಿ ಮಾತನಾಡಿದರು. ನಿಮಗೆ ಈ ರೀತಿ benefits ಇದೆ ಎಂದು ಹೇಳಿದರು, ಕಾರಿನ ಸಲುವಾಗಿ 10.00 ಲಕ್ಷ ರೂಪಾಯಿಗಳು 7% ಬಡ್ಡಿಗೆ ಸಾಲ ಸಿಗುತ್ತದೆ. ನಿಮಗೆ ರೂಮ್ಸ್ ಸಿಗುತ್ತದೆ, ಟೆಲಿಫೋನ್ allowance ಸಿಗುತ್ತದೆ. ನಮ್ಮ ಎಲ್ಲಾ rights and benefits ಬಗ್ಗೆ ಹೇಳಿದರು. ನಮ್ಮ ರೈತರ ಸೌಲಭ್ಯಗಳ ಬಗ್ಗೆ ನೋಡಿದಾಗ ನಮ್ಮ ದಕ್ಷಿಣ ಬೀದರ್‌ನಲ್ಲಿರುವ ರೈತರು ಶುಗರ್‌ಕೇನ್ ಹಾಕುತ್ತಾರೆ, ಅವರಿಗೆ ಅದರಿಂದ ಎಷ್ಟು ಹಣ ದೊರೆಯುತ್ತದೆಂದು ಮೊದಲೇ ಹೇಳುವುದಿಲ್ಲ. ಅವರು ಒಂದು ವರ್ಷದವರೆಗೆ ಆ ಬೆಳೆ ನೋಡುತ್ತಾರೆ, ಗೊಬ್ಬರ ಹಾಕುತ್ತಾರೆ, ಎಲ್ಲಾ ಶ್ರಮ ಪಡುತ್ತಾರೆ ಅವೆಲ್ಲಾ ಆದ ನಂತರ ಎಷ್ಟು ಬೆಲೆ ಅವರಿಗೆ ಕೊಡುವುದು ಎಂದು decide ಮಾಡುತ್ತಾರೆ. ಅದು ತಪ್ಪು, ಏಕೆಂದರೆ ನಾವ್ಯಾರಾದರೂ ಯಾವುದೇ job ಗೆ ಹೋಗಬೇಕಾದರೆ ನಾವು ನಮಗೆ ಏನು benefits, ಎಷ್ಟು salary ಎಂದು ಮೊದಲು ಕೇಳುತ್ತೇವೆ. ಅದೇ ರೀತಿ ನನ್ನ ಆಸೆ ಏನೆಂದರೆ ನಾವು ಶುಗರ್ ಕೇನ್‌ಗೆ ಮೊದಲೆ minimum price decide ಮಾಡಬೇಕು. ಯಾವಾಗ ಅದು harvesting time ಬರುತ್ತದೆ, ಅದಕ್ಕೆ value ಜಾಸ್ತಿಯಾದರೆ ರೈತರಿಗೆ ಜಾಸ್ತಿ ಕೊಡಬೇಕು, ಕಡಿಮೆ ಆದರೆ that should be the risk of the sugar factory. ಏಕೆ ಇಷ್ಟು risk ರೈತರಿಗೆ

ಕೊಡುತ್ತಿದ್ದೀರಿ? ಅದು ತಪ್ಪು. ಆದ್ದರಿಂದ ತಾವು ಹಾಗೆ ಮಾಡಿದರೆ ರೈತರಿಗೆ ಗೊತ್ತಾಗುತ್ತದೆ, ನನ್ನ ಹತ್ತಿರ 100 ಟನ್ ಶುಗರ್ ಕೇನ್ ಇದೆ, ನನಗೆ 2000 ರೂಪಾಯಿಗಳು ಸಿಗುತ್ತದೆ ಅದು ಅವನಿಗೆ bank account ಆದ ಹಾಗೆ ಆಗುತ್ತದೆ, ಆಗ ಯಾವ ಬ್ಯಾಂಕ್‌ನವರಾದರೂ ಅವರಿಗೆ ಹಣ ಕೊಡಬಹುದು. ಅವನ ಮಗಳ ಮದುವೆ ಇರಬಹುದು, ಮನೆಯಲ್ಲಿ ಯಾರಾದರೂ ಸತ್ತಿರಬಹುದು, ಯಾರಾದರೂ ಆಧಾರವಾಗಿದ್ದರೆ ಅವರಿಗೆ ಸಹಾಯವಾಗುತ್ತದೆ. ಎಷ್ಟು ದುಡ್ಡಿದೆ ಎಂದು ಮೊದಲೇ it is necessary to decide. ಏಕೆಂದರೆ ಮಳೆ ಇಲ್ಲ. ನೀರು ಇಲ್ಲ, ಈಗ ಶುಗರ್ ಫ್ಯಾಕ್ಟರಿಯವರು ಅವರನ್ನು hostages ರೀತಿ ಇಟ್ಟಿದ್ದರು. ಏಕೆಂದರೆ ಶುಗರ್‌ಕೇನ್ ಒಣಗಿ ಹೋಗುತ್ತಿದೆ. ಎಲ್ಲಾ desperate ಮಾಡುತ್ತಿದ್ದರು ಇದು ನನ್ನ ವಿಚಾರದಲ್ಲಿ ತಪ್ಪಲ್ಲ, ಬಹಳ ಪಾಪ. ರೈತರಿಗೆ ಪಾಪ ಮಾಡಿದಂತೆ ಆಗಿದೆ. ಆದ್ದರಿಂದ It is very important to do that. ಈಗ ಬೆಳಿಗ್ಗೆ ಎಲ್ಲರೂ ಬೋರ್‌ವೆಲ್ ಬೇಕು, machines ಬೇಕೆಂದು ಮಾತನಾಡಿದರು. ನಮ್ಮ ಹತ್ತಿರ machines ಇದೆ ಬೋರ್‌ವೆಲ್ ಸಹ ಇದೆ, ಆದರೆ ಅದನ್ನು ನಡೆಸಲಿಕ್ಕೆ ಕರೆಂಟ್ ಇಲ್ಲ. ಒಂದು ವಾರದವರೆಗೆ ಕರೆಂಟ್ ಇಲ್ಲ. ಬೋರ್‌ವೆಲ್ ಮತ್ತು ಮೆಷಿನ್ ತೆಗೆದುಕೊಂಡು ನಾವೇನು ಮಾಡಬೇಕು? ಅದರ picture ನೋಡಿಕೊಂಡು ಕೂಡಬೇಕೆ? ಕರೆಂಟ್ ಇಲ್ಲ. ಏಕೆ ಕರೆಂಟ್ ಇಲ್ಲವೆಂದು ಕೇಳಿದರೆ ಅವರು ಏನೇನೋ reason ಕೊಡುತ್ತಾರೆ. ಇದರಿಂದ ನನಗೆ confuse–ಆಗಿದೆ. ಮತ್ತೆ ನಾವು ಮೀಟಿಂಗ್ ಮಾಡಿದಾಗ, I think I am an average intelligene person. ನಾನು Master's Degree ಇದೆ, ಪೂರ್ಣ ದುನಿಯಾದಲ್ಲೆಲ್ಲಾ ನಾನು ಕೆಲಸ ಮಾಡಿ ಬಂದಿದ್ದೇನೆ. ಯಾರಾದರೂ ಅಧಿಕಾರಿಗಳು ವಿವರ ಕೊಡುತ್ತಾರೆಂದರೆ 50 ಹಳ್ಳಿಗಳ ಮನೆಗಳ ಬಗ್ಗೆ ನೋಡಲಿಕ್ಕೆ 35 ವಿವಿಧ ಇಲಾಖೆಗಳಿವೆ. ಅವರು ಇವರಿಗೆ ಹೇಳುವುದು, ಇವರು ಅವರಿಗೆ ಹೇಳುವುದು. ಆಗ ನಾನು ಇದು ನನಗೇ ಅರ್ಥವಾಗುವುದಿಲ್ಲ. ಇನ್ನು ಜನರಿಗೆ, ರೈತರಿಗೆ ಹೇಗೆ ಅರ್ಥವಾಗುತ್ತದೆ ಎಂದು ಹೇಳಿದೆ. ಹೇಗೆ ಅವರು ಸಹಾಯ ಪಡೆದುಕೊಳ್ಳಬೇಕು? ಇದು ಹೇಗಾಗುತ್ತದೆ? Its impossible.– ಅದಕ್ಕೆ ನನ್ನ ವಿನಂತಿ ಏನೆಂದರೆ ಒಂದು, there should be an administrative

reform, especially at village level. ಏಕೆಂದರೆ ರೈತರು 35 ಜನರ ಹತ್ತಿರ ಹೋದಾಗ ಅಲ್ಲಿ ಹೋಗಿ, ಇಲ್ಲಿ ಹೋಗಿ ಎಂದು ಹೇಳುತ್ತಾರೆ, ಇದಕ್ಕೆ ಒಂದು simple example ಹೇಳುತ್ತೇನೆ, ನಾನು ಚುನಾವಣೆಗೆ ಹೋದಾಗ ನನಗೆ ಹೆಚ್ಚಿನ request ಬಂದಿದ್ದು ವಿಧವೆಯವರಿಂದ. ವಿಧವೆಯರು ಬಂದು ನನ್ನ ಹತ್ತಿರ ಅಳುತ್ತಿದ್ದರು. ನಮ್ಮ ಗಂಡ ತೀರಿಕೊಂಡು ಒಂದು ವರ್ಷವಾಯಿತು, ನಾವು pension ಸಲುವಾಗಿ ಹೋಗುತ್ತೇವೆ. ನಮಗೆ ಸರಿಯಾದ ರಸ್ತೆ ಇಲ್ಲ, ಆಟೋರಿಕ್ಷಾ ಇಲ್ಲ ಹೋಗಲಿಕ್ಕೆ ಹೇಗಾದರೂ risk ತೆಗೆದುಕೊಂಡು ಹೋಗುತ್ತೇವೆ, ಬೀದರ್‌ಗೆ ಹೋಗುತ್ತೇವೆ. ತಹಸೀಲ್ದಾರ್ ಆಫೀಸ್‌ಗೆ ಹೋಗುತ್ತೇವೆ. ಹೋದಾಗ ಅಲ್ಲಿ ಅವರು ನಮಗೆ ಇದು ತನ್ನಿ, ಅದು ತನ್ನಿ ಎಂದು ಹೇಳಿ ಹತ್ತು ತಿಂಗಳ ತನಕ ಓಡಾಡಿಸುತ್ತಾರೆ, ಆಮೇಲೆ ನಾವು ಬಿಟ್ಟು ಬಿಡುತ್ತೇವೆ. ಎಂದು ಹೇಳಿದರು. ಇದೇ ರೀತಿ senior citizens problem ಇದೆ. ಇದು ಏಕೆ ಹೀಗಾಗುತ್ತಿದೆ? ಒಬ್ಬ ಅಧಿಕಾರಿ ನನ್ನ ಹತ್ತಿರ ಖೇಣಿಯವರೆ ನೀವು ಏನು ಬೇಕಾದರೂ ಮಾಡಿ, ಸ್ವಾತಂತ್ರ್ಯ ಬಂದು ಪೂರ್ಣ 67 ವರ್ಷಗಳ ಇತಿಹಾಸದಲ್ಲಿ ಎಷ್ಟುಜನ ಅಧಿಕಾರಿಗಳು ಜೈಲಿಗೆ ಹೋಗಿದ್ದಾರೆಯೇ ಎಂದು ಹೇಳಿದರು. ಅದರ ಬಗ್ಗೆ ತನಿಖೆ ಕೂಡ ಆಗುತ್ತಿದೆ. ಕೇಸಸ್ continue ಆಗುತ್ತವೆ, ಆದರೆ ಏನಾದರೂ ಆಗುತ್ತದೆಂದು ಅವರಲ್ಲಿ ಭಯ ಇಲ್ಲ. ಈಗ ರಮೇಶ್‌ಕುಮಾರ್‌ರವರು ಅವರು ಲ್ಯಾಂಡ್ ಬಗ್ಗೆ ಏನು ಹೇಳಿದರು ಅದು ಕರೆಕ್ಟ್ ನನಗೆ ಇದರಲ್ಲಿ expertise ಇದೆ, ಅದಕ್ಕೆ 550 ಕೇಸುಗಳಲ್ಲಿ ನಾನು ಗೆದ್ದಿದ್ದೇನೆ. ಎಲ್ಲಾ ಕೇಸುಗಳನ್ನು ಮುಂದಕ್ಕೆ ಹಾಕುತ್ತಾರೆ. ರಮೇಶ್‌ಕುಮಾರ್ ಅವರು ಹೇಳಿದ್ದು ಕರೆಕ್ಟ್ ಏಕೆ ಆ ರೀತಿ ಆಗುತ್ತಿದೆ ಎಂದರೆ ಬೇರೆ ದೇಶದಲ್ಲಿ Tort Act ಇದೆ, ಮೊಯಿಲಿಯವರು Law Minister ಇದ್ದಾಗ Tort Act ತರಲು ಕೆಲಸ ಮಾಡುತ್ತಿದ್ದರು, ಆದರೆ ಅಷ್ಟರಲ್ಲೇ ಅವರ ಇಲಾಖೆ ಬದಲಾವಣೆ ಆಯಿತು. Tort Act ಬೇಕು. ಅಂದರೆ ಯಾರು false cases ಹಾಕುತ್ತಾರೆ, ಅವರಿಗೆ quick punishment ಇರುತ್ತದೆ. Three times damages ಇರುತ್ತದೆ. ಅದಕ್ಕೆ ಆಗ ಸ್ವಲ್ಪ discipline ಬರುತ್ತದೆ. ಈಗೇನಾಗುತ್ತದೆ, ನಮಗೆ ಯಾರ ಮೇಲೆ revenge ತೆಗೆದುಕೊಳ್ಳುವುದಿದೆ, ನಾನು ಯಾರಗೆ ಹೇಳಿರುತ್ತೇನೆ, ಅವರ ಹತ್ತಿರ ಏನೂ ಇರುವುದಿಲ್ಲ, specially we use

the Scheduled Caste and Scheduled Tribe prople, ಏಕೆಂದರೆ ಅವರು Atrocity ಕೇಸಸ್ ಹಾಕುತ್ತಾರೆ. Full of cases, but there is no Tort Act, ಅವರು ಹೇಳಿದ್ದು ಸರಿ. Till we have Tort Act, we are going to suffer humiliation.

ನಾನು ಜರ್ಮನಿ ದೇಶದಲ್ಲಿ ಇದ್ದಾಗ ಇಲ್ಲಿ murder charges ಹಾಕಿದ್ದರು. ನಾನು ಜರ್ಮನಿಯಲ್ಲಿದ್ದೆ, ನನಗೆ ಗೊತ್ತಿಲ್ಲ, ನಾನು ಹೇಗೆ ಇಲ್ಲಿ ಬಂದು ಕೊಲೆ ಮಾಡಿದೆ ಎಂದು? ಅದೇನಾಗುತ್ತದೆ ಅಮೇರಿಕದಲ್ಲಿ ಕೂತು internet ನಲ್ಲಿ ನಮ್ಮ ಹೆಂಡತಿ-ಮಕ್ಕಳು ಮತ್ತು ನಮ್ಮ relatives ನೋಡುತ್ತಾರೆ. ಮಕ್ಕಳ ಸ್ನೇಹಿತರು ನಿಮ್ಮ ಅಪ್ಪ ಕೊಲೆ (ಖೂನಿ) ಗಾರನಾಗಿದ್ದಾನೆ ಎಂದು ಅವರ ಸ್ನೇಹವನ್ನು ಮುರಿದುಬಿಡುತ್ತಾರೆ. ಅದು ಬಹಳ ತಪ್ಪು. ಅದಕ್ಕೆ ಕೇಸುಗಳು ನಡೆಯುತ್ತಾ ಹೋಗುತ್ತದೆ. ಎರಡು ವರ್ಷಗಳಾಯಿತು ಇನ್ನೂ ಕೇಸು ನಡೆಯುತ್ತಿದೆ. ಆದ್ದರಿಂದ Tort Act and Fast Justice ಬೇಕು.

ತಾವು Tourism ಬಗ್ಗೆ ಹೇಳಿದಿರಿ. Hyderabad-Karanataka is the wonderful area for tourism. Not only wonderful area for tourism, but also for social integration. ನಾನು ಅಷ್ಟೂ ಹಳ್ಳಿಗಳಲ್ಲಿ ಒಂದು ಸಾಮಾನ್ಯ ಹಳ್ಳಿ ಆಲಂಪ್ರಭು ಎಂದಿದೆ, ಅಲ್ಲಿಗೆ ಹೋಗಿದ್ದೆ. ಇಬ್ಬರೂ ಮುಸ್ಲಿಂ ಮತ್ತು ಹಿಂದೂಗಳ ಸ್ನೇಹವಿತ್ತು. ಇಬ್ಬರದೂ graveyard ಇದೆ ಅಲ್ಲಿ ಏನು beautiful structures ಇದೆ. ನನಗಂತೂ ಅದನ್ನು ನೋಡಿ ಆಶ್ಚರ್ಯವಾಯಿತು, ಎಷ್ಟು wonderful structures, ನೀವೆಲ್ಲ ಬೇರೆ ಸ್ಥಳಗಳಾದ ಬೀದರ್‌ನ ಫೋರ್ಟ್ ಗೋಲ್‌ಗುಂಬಜ್ ನೋಡಿದ್ದೀರಿ, but we are not exposing them. ನಿನ್ನೆ Film Artists Chamberನಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿ ಸಚಿವರಾದ ಶ್ರೀ ಅಂಬರೀಷ್‌ರವರನ್ನು ವಿನಂತಿಸಿದೆ. ನೀವು ಎಲ್ಲ ದೊಡ್ಡ ಸಿನೆಮಾ ಆರ್ಟಿಸ್ಟ್ಸ್ ಇದ್ದೀರಿ, ಬನ್ನಿ, ಬೀದರ್‌ಗೆ ಬಂದು ಮೀಟಿಂಗ್ ಮಾಡಿ ನೋಡಿ ಎಷ್ಟು ಸುಂದರವಾಗಿದೆ. ಅಲ್ಲಿ ನೀವು ಶೂಟಿಂಗ್ ಮಾಡಬಹುದು, ಸುಮ್ಮನೆ ಏಕೆ ಆಸ್ಟ್ರೇಲಿಯಾ, ಸ್ವಿಟ್ಜರ್‌ಲ್ಯಾಂಡ್ ನ್ಯೂಜಿಲ್ಯಾಂಡ್‌ಗೆ ಹೋಗುತ್ತೀರಿ, ನಮ್ಮ ಏರಿಯಾದಲ್ಲಿ ಶೂಟಿಂಗ್ ಮಾಡಿ. ಆಗ ನಮ್ಮ ಜನರಿಗೂ ಸ್ವಲ್ಪ pride ಬರುತದೆ ಎಂದು

ಹೇಳಿದೆ. ಅದಕ್ಕೆ ಅವರು ಒಪ್ಪಿ ಮುಂದಿನ ಸಭೆ ಅಲ್ಲಿ ಮಾಡುವುದಾಗಿ ಹೇಳಿದ್ದಾರೆ. ಹಾಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕಾದರೆ ಬೇರೆ ಬೇರೆ ಏರಿಯಾಗಳನ್ನು ನಾವು expose ಮಾಡಬೇಕಾಗುತ್ತದೆ. ಕೇವಲ ಬೋರ್ಡ್ ಹಾಕಿದರೆ ಪ್ರವಾಸಿಗರು ಬರುವುದಿಲ್ಲ. People have to feel the hunger to see that area. Tourism ಸಲುವಾಗಿ ಅದು ಬೇಕಾಗುತ್ತದೆ. ಈಗ ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವುದಾಗಿ ಹೇಳುತ್ತಿದ್ದಾರೆ. ಆದರೆ ಈಗ ನಮ್ಮ ಹತ್ತಿರ ಹಣ ಇಲ್ಲ, ಬಜೆಟ್ ಇಲ್ಲವೆಂದು ಚರ್ಚೆಯಾಗುತ್ತಿದೆ. ನಾನು ಹೇಳುವುದೇನೆಂದರೆ ಅಕ್ಕಿ ಮಾತ್ರ ಏಕೆ, rice is only for starch, proteins ಇರುವುದಿಲ್ಲ. Give the option forJawar and Raagi. ಏಕೆಂದರೆ ನಮ್ಮ ಮಂಡ್ಯದವರು ರಾಗಿ ತಿನ್ನುತ್ತಾರೆ. ಬೀದರ್‌ನವರು ಜೋಳ ತಿನ್ನುತ್ತಾರೆ. ಅದರಲ್ಲಿ ಪ್ರೋಟಿನ್ಸ್ ಇದೆ. ನೋಡಿ ನಮ್ಮ ಬೀದರ್‌ನಲ್ಲಿ ನಮ್ಮ ಮಕ್ಕಳು they are getting smaller and weaker. ನಾನು ಒಬ್ಬ ಹುಡುಗನನ್ನು ಭೇಟಿಯಾದೆ, ನನಗನ್ನಿಸಿತು ಅವನು 10 ವರ್ಷಗಳಿರಬಹುದು ಎಂದು, ಆದರೆ ಅವನಿಗೆ 15–16 ವರ್ಷ ವಯಸ್ಸಾಗಿತ್ತು. ಏಕೆಂದರೆ ಪ್ರೋಟಿನ್ ಸಪ್ಲೈ ಇಲ್ಲ. So, it is important to introduce millets in that as on option. ಅವರು ತೆಗೆದುಕೊಳ್ಳಲಿ ಅಕ್ಕಿ ಒಂದು ರೂಪಾಯಿಗೆ ಕೊಟ್ಟರೆ, millets and jawar ಕೂಡ ಒಂದು ರೂಪಾಯಿಗೆ ಕೊಡಿ, let the option be there for the people .For example ನಮ್ಮ ಬೀದರ್ district ನಲ್ಲಿ the total area for cultivation is 48,000 hectares. ಅದರಲ್ಲಿ paddy is only 9547 hectares. While jawar is 27295hectares. ಹಾಗೆ ಜವಾರ್ introduce – ಮಾಡಿದರೆ ನಮ್ಮ ರೈತರಿಗೂ ಸ್ವಲ್ಪ benefit ಆಗುತ್ತದೆ. Price support -- ಸಿಗುತ್ತದೆ. It is important.– ಏಕೆಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಜೋಳ ಜಾಸ್ತಿ ತಿನ್ನಬಹುದು. ಸೋಯಾಬೀನ್, ಭತ್ತ ಇತ್ಯಾದಿಗಳ option ಕೊಡಿ. ಏಕೆಂದರೆ ಕೆಲವು ಜನ ಐಸ್‌ಕ್ರೀಂನಲ್ಲಿ ವೆನಿಲಾ, ಚಾಕೋಲೇಟ್ ಬೇಕು ಎನ್ನುತ್ತಾರೆ, ಹಾಗೇ ಪ್ರೋಟಿನ್ ಸಲುವಾಗಿ option ಕೊಡಿ. ಅದಕ್ಕಾಗಿ ನನ್ನ ಈ ವಿನಂತಿಯನ್ನು ಪರಿಗಣಿಸುವಂತೆ ಮಾನ್ಯ

ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ನಂತರ ನಾವು ನೀರಿನ ವಿಷಯ ಮಾತನಾಡುತ್ತಿದ್ದೇವೆ. ಬೀದರ್ ದಕ್ಷಿಣದಲ್ಲಿ ನಾವು ಒಂದು ಸ್ಟಡಿ ಮಾಡಿಸಿದ್ದೇನೆ. 27 ಕೆರೆಗಳು ಇವೆ. ಅವೆಲ್ಲಾ ಒಣಗಿವೆ. ಎಲ್ಲಾ ಸಿಲ್ಟ್ ಆಗಿವೆ. 1100 hectares of lake bodiesಇವೆ ಅದರಲ್ಲಿ one drop ನೀರಿಲ್ಲ. ಅದನ್ನು de-silting ಮಾಡಲಿಕ್ಕೆ ನಮಗೆ 80 ಕೋಟಿ ರೂಪಾಯಿಗಳು ಬೇಕಾಗಿದೆ.ಅದನ್ನು de-silting ಮಾಡಿದರೆ immediately we will have water for the benefit of the villages. ಆದರೂ we are talking of the bore-wells. Scarcity of water ನಿಂದ ನಾವು ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದೇವೆ. Bore-wells are getting deeper and deeper. ನಾನು ನಿಮಗೊಂದು ಉದಾಹರಣೆ ಕೊಡುತ್ತೇನೆ. ನಮ್ಮ project ನಲ್ಲಿ ಗಂಗತನಹಳ್ಳಿ ಅಂತ ಒಂದು dried up lake ಇತ್ತು. ನಾನು ಒಂದು ದಿವಸ ನೋಡಿ, let us de-silt it from our cost ಎಂದು ಹೇಳಿದೆ. ನಮ್ಮ cost ನಲ್ಲಿ de-silt ಮಾಡಿದೆವು. ಅದಕ್ಕಿಂತ ಮೊದಲೇ ಬೇರ್‌ವೆಲ್ ನಲ್ಲಿ water level was 1000 feet. De-silt ಮಾಡಿ ಎರಡು ವರ್ಷವಾಯಿತು, ಈಗ the water level has come up to 400 feet. Benefit. ಆಗುತ್ತವೆ. ಅದಕ್ಕೆ de-silting should go hand in hand with the bore-wells of water development. ಅದು ನಮ್ಮ ಇಚ್ಛೆ ಇದೆ,1100 hectares of lake de-silt ಮಾಡಬೇಕು, ಮತ್ತೆ lot of discussions has been taking place about Cauvery. ಸರ್ಕಾರ ಹೇಳುವುದು ಸರಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಹೇಳುವುದು ಸರಿ.

ಇಬ್ಬರೂ correct ಇದ್ದಾರೆ. ಏಕೆಂದರೆ English language is a very dangerous language. ಹೇಗೆ ಬೇಕಾದರೂ interpret ಮಾಡಬಹುದು Especially when it gets in the hands of lawyer, it gets more dangerous !ಅದಕ್ಕೆ ನನ್ನ ವಿನಂತಿಯೇನಂದರೆ; we can add some clarifications to that. ಇಲ್ಲಿ ಬರೆದಿದ್ದಾರೆ; "The long pending extension, renovation and

modernization projets of the Cauvery basin will be taken up for approval of the Government of India, in conformity with the Cauvery award". Confusion ಆಗುತ್ತದೆ, ಯಾರು ಬೇಕಾದರೂ ಹೇಳಬಹುದು, Government has accepted Cauvery Award. ಆದರೆ ನಾವು argument ಮಾಡಬಹುದು, ನಾವು ಅದನ್ನು accept ಮಾಡಿಲ್ಲ, but we are doing under it whatever is right now. If we add one line to that 'without prejudice to our rights under SLP filed, ಅದಕ್ಕೆ clarity ಬಂದು ಬಿಡುತ್ತದೆ. ಯಾರಿಗೂ argument ಮಾಡುವುದಕ್ಕೆ ಆಗುವುದಿಲ್ಲ. ಕುಃಜಯಲಲಿತಾ ಅವರಿಗೂ argument ಮಾಡುವುದಕ್ಕೆ ಆಗುವುದಿಲ್ಲ, ಡಿ.ಎಂ.ಕೆ. ಅವರಿಗೂ argumet ಮಾಡುವುದಕ್ಕೆ ಆಗುವುದಿಲ್ಲ, because we are developing under the existing rights without leaving out our rights under the SLP. ಇದೊಂದು ನನ್ನ request ಇದೆ, add ಮಾಡಿದರೆ ಆಗುತ್ತದೆ.

ಮತ್ತೆ ನಾವು 371(ಜೆ) ಬಗ್ಗೆ ಹೇಳುತ್ತಿದ್ದೇವೆ. ನನಗೆ ಗೊತ್ತಿರುವ ಹಾಗೆ 5 ವರ್ಷಗಳಿಂದ ಮಾತನಾಡುತ್ತಿದ್ದೀರಿ. ಜನ ಹೇಳುತ್ತಾರೆ ಅದಕ್ಕಿಂತ ಜಾಸ್ತಿ ಮಾಡುತ್ತಿದ್ದಾರೆ. ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರ ಇದೆ, ರಾಜ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರ ಇದೆ. why should we wait for all the rules to be framed? ಏಕೆಂದರೆ ನಮ್ಮದು 39 MLA constituencies ಇವೆ ಅಲ್ಲಿ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಎಲ್ಲರಲ್ಲಿ ನನ್ನ ವಿನಂತಿಯೇನೆಂದರೆ ನಮ್ಮ ಜನರು ಈಗಲೇ suffer ಆಗುತ್ತಿದ್ದಾರೆ, ತಾವು legal ಆಗಿ ಮಾಡುವವರೆಗೆ ಎಷ್ಟು ಜನರು ಸಾಯಬಹುದು, ಎಷ್ಟು difficulties– ಆಗುತ್ತದೋ ಗೊತ್ತಿಲ್ಲ. ಅದಕ್ಕೋಸ್ಕರ ತಾವುr immediately for each assembly constituency 10 ಕೋಟಿ ರೂ.ಗಳನ್ನು emergency ಯಾಗಿ release ಮಾಡಿ. We can carry out the porks and credit can be taken for Article 371(J) ಏಕೆಂದರೆ ಈಗ ಕೆಲಸ ಪ್ರಾರಂಭವಾಗುತ್ತದೆ. ಎಲ್ಲಾ stage rectify ಮಾಡಿ

ಮಾಡುವುದಕ್ಕೆ ಒಂದು ವರ್ಷವಾದರೂ ಬೇಕಾಗುತ್ತದೆ. ಅದಕ್ಕೆ ನನ್ನ ಇಚ್ಛೆ ಇದೆ, 10 crores for each assembly constituency release ಮಾಡಿ. ಎಷ್ಟು ಬಡತನವಿದೆ ಎಂಬುದನ್ನು ತಾವು ಬಂದು ನೋಡಿ ಮಾನ್ಯ ಅಧ್ಯಕ್ಷರೆ, ತಮಗೆ ಆಶ್ಚರ್ಯವಾಗುತ್ತದೆ. ಬೆಂಗಳೂರು ಮತ್ತು ಮೈಸೂರು developed area ಇದೆ. ಒಂದು simple ಉದಾಹರಣೆ ಕೊಡುತ್ತೇನೆ, ಬೆಂಗಳೂರಿನಲ್ಲಿ 460 hospitals ಇವೆ.ಸ 20 ಸಾವಿರ ಜನಕ್ಕೆ ಒಂದು ಆಸ್ಪತ್ರೆ ಇದೆ. ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಮೂರು ಲಕ್ಷ ಜನ ಇದ್ದರೂ ಒಂದೂ ಆಸ್ಪತ್ರೆ ಇಲ್ಲ. ಮಾನ್ಯ ಕೆ.ಆರ್.ರಮೇಶ್ ಕುಮಾರ್ ಅವರು ಹೇಳಿರುವುದಕ್ಕೆ I agree. Every Assembly constituency should have one Specialty Hospital. ಅದರಿಂದ health will improve. ಇನ್ನೊಂದು programme ಮಾಡುತ್ತಿದ್ದೇವೆ. ನಾವುAll three lakhs people of my constituency ಅವರ blood sample ತೆಗೆದುಕೊಂಡು, ಎಕ್ಸ್‌ರೇ ಮಾಡಿ, we are creating a medical history. ಅದರಿಂದ ಏನಾಗುತ್ತದೆಯೆಂದರೆ, ಯಾರಿಗೆ ಡಯಾಬಿಟಿಸ್ ಇದೆ ಅವರ ಮಾಹಿತಿ ಪಡೆಯುತ್ತಿದ್ದೇವೆ.which has got preempt programme Heart ಗೆ ಸಂಬಂಧಪಟ್ಟದ್ದು ಸಹ ಮಾಡುತ್ತಿದ್ದೇವೆ. Within next three months that would be done. We are taking lot help from private people to do this. We are doing this work.

ಇನ್ನೊಂದು ವಿಷಯ;Infrastructure projects ಏಕೆ failure ಆಗುತ್ತವೆ ಎಂದರೆ,for selfish reason project announce ಆದ ನಂತರ ಸ್ವಲ್ಪ delay ಮಾಡುತ್ತಾರೆ.Delay ಮಾಡಿದ ನಂತರ ಜನ ಬೇನಾಮಿ ಲ್ಯಾಂಡ್ ಖರೀದಿ ಮಾಡುತ್ತಾರೆ. for cheaper price. ಆಮೇಲೆ they want to raise the price of the land. That is for the benefit. There is nothing wrong in that, I am not blaming them ಏನು ಮಾಡಬೇಕೆಂದರೆ ಅಮೇರಿಕಾ ಮತ್ತು ಇಂಗ್ಲೆಂಡ್ ನಲ್ಲಿ ಪ್ರೋಗ್ರಾಮ್ ಇರುತ್ತದೆ. ನಾನು ಅಶೋಕ್ ಖೇಣಿ ಎಂದು ಹೆಸರು ಹಾಕಿದರೆ ನನ್ನ ಒಡೆತನದ ಲ್ಯಾಂಡ್ ರಾಜ್ಯದಲ್ಲಿ ಎಲ್ಲೆಲ್ಲಿದೆ ಎಂಬುದು ಸಂಪೂರ್ಣವಾಗಿ ಬರುತ್ತದೆ. ಹಾಗೆ ಮಾಡಿದರೆ

we will avoid this benami system. So, it is necessary to put that kind of the programme. Bhoomi programming can be modified to do that and then it can be accessible by anybody. Why should we go for RTI? Why should we go for application? We can go a computer and access it. ಎಷ್ಟು ಪ್ರಾಪರ್ಟಿ ಇದೆ ಎಂಬುದೆಲ್ಲವೂ ಗೊತ್ತಾಗಲಿ. This is important to modify that programme. That could be done and lot of other countries are doing it. ಆದರಿಂದ entire infrastructure projects would speed up. ಏಕೆಂದರೆ ನೀವು ಎಲ್ಲಾ ಬೇನಾಮಿ ಮಾಡುವುದಕ್ಕೆ ಹೋದರೆ you will get caught. It won't allow you to do it. ಬೇನಾಮಿ ಹಾಕಿದರೆ ಎಲ್ಲಾ ಬಂದು ಬಿಡುತ್ತದೆ. It is a very powerful tool. My request is, Hon'ble Revenue Minister should consider that to put that thing to bring some kind of discipline into the thing. 371(ಜೆ) ಮಾಡುವಾಗ ನಾನು ನೋಡಿರುವುದು ಇನ್ನೊಂದು there is no dearth of funds. ನಾನು ಹೋದಾಗ ನೋಡಿದ್ದೇನೆ. But lot of funds, transmission loss ಆಗುತ್ತಿದೆ. ಬೆಂಗಳೂರು ಬೀದರ್ ನಿಂದ ಇಷ್ಟು ದೂರ ಇದೆ, ಬೆಂಗಳೂರಿಗೆ ಬರುವವರೆಗೆ transmission loss ಆಗುತ್ತಿದೆ. ನಾವೆಲ್ಲ ಯು.ಎಸ್.ಎ. ನಲ್ಲಿ ಸ್ಟಡಿ ಮಾಡಿದ್ದೇವೆ. Not even 25% of the funds sanctioned has gone for the development. ನಾನು ಈ ಕುರಿತು ವರದಿ ತಯಾರು ಮಾಡುತ್ತಿದೇನೆ. I will submit it to Hon'ble Chief Minister and the Speaker after the report has been prepared. I have put a team to prepare for that report. ಅದಕ್ಕೆ ನನ್ನ ಮನವಿ ಏನಿದೆ, ತಾವು 371 (ಜೆ) ಮಾಡಿದರೆ ಅದರ ಜೊತೆಗೆ ಒಂದು Special Fast Track Court ಮಾಡಿ. It somebody misuses that fund of the poor people, immediately punishmet should happen. ಇವೆಲ್ಲಾ ಕೇಸ್ ಹಾಕುತ್ತಾ ಹೋದರೆ,

ಇನ್ನೂ ಬೋಘೋರ್ಸ್ ನಡೆದಿದೆ, ಅದು ನಡೆದಿದೆ ಎಲ್ಲಾ ನಡೆದಿದೆ. 30–40 ವರ್ಷವಾಗುತ್ತದೆ. Immediate punishment should be done, so that some fear of utilizing those funds for the betterment of the people. ಏಕೆಂದರೆ ನೀವು ಕಷ್ಟದಿಂದ ಫಂಡ್ಸ್ ನಮಗೆ ಕೊಡುತ್ತಿದ್ದೀರಿ. The fund should go to the people.

Education ಬಗ್ಗೆ ಹೇಳಿದರು. My Government accords the highest priority to the Education sector, in general and School Education in particular. I am very happy.ನಾನು ಎಲೆಕ್ಷನ್‌ಗೆ ಹೋದಾಗ ಒಬ್ಬ ಹತ್ತು ವರ್ಷದ ಹುಡುಗ ಬಂದ ನನ್ನ ಹತ್ತಿರ ಅಂಕಲ್. ನನಗೊಂದು question ಕೇಳುವುದಿದೆ. ಎಂದು ಕೇಳಿದೆ. ಯಾರೋ ಕೂಡೋ ಕೂಡೋ ಎಂದು ಹೇಳಿದರು. ನಾನು ಹೇಳಿದೆ 'Let him ask question.' ಎಂದು. ಅವನಿಗೆ ಏನು ಎಂದು ಕೇಳಿದೆ. ಅಂಕಲ್, ನಾನು ಹತ್ತು ವರ್ಷದವನು, 5th Standar ನಲ್ಲಿದ್ದೇನೆ. ರಾತ್ರಿ ಅಭ್ಯಾಸ ಮಾಡುವುದಕ್ಕೆ electricityಇರುವುದಿಲ್ಲ. ಕದೀಲು ಅಥವಾ ಕ್ಯಾಂಡಲ್ ಬೆಳಕಿನಲ್ಲಿ ಅಭ್ಯಾಸ ಮಾಡಬೇಕು. ಮತ್ತೆ ನನಗೆ ಲೈಬ್ರರಿ ಇಲ್ಲ. Play ground ಇಲ್ಲ.Teachers ಬರುತ್ತಾರೆ, ಹೋಗುತ್ತಾರೆ, ಯಾವಾಗ ಬರುತ್ತಾರೆ ಗೊತ್ತಿಲ್ಲ. ಬೆಂಗಳೂರಿನಲ್ಲೆಲ್ಲ International Schools ಇದೆ. ಆ ಮಕ್ಕಳ ಜೊತೆ ಹೇಗೆ compete ಮಾಡಬೇಕು? ನಮ್ಮ ಭವಿಷ್ಯ ಹೇಗೆ? ಎಂದು ಅವನು ನನಗೆ ಪ್ರಶ್ನೆಗಳನ್ನು ಕೇಳಿದ. Correct question. 10 year old child asking me ನಮ್ಮದೇನು ಭವಿಷ್ಯ? ನೀವು as seniors for the development of our future ನಮಗೆ ಏನೂ facilities ಕೊಡುತ್ತಿಲ್ಲ. How can we compete against the boys in Bangalore or boys in other countries? ನನಗೆ ಏನೂ ಮಾತನಾಡುವುದಕ್ಕೆ ಆಗಲಿಲ್ಲ. As a temporary solution ಏನು ಮಾಡಬೇಕೆಂದು ನಾವು ವಿಚಾರ ಮಾಡಿದೆವು. ನಾನೇ ನಿಜ ನೋಡಿದ್ದೇನೆ. 2–3 ತಾಸು electricity ಬರುತ್ತದೆ. ಮತ್ತೆ ರಸ್ತೆ ಚೆನ್ನಾಗಿಲ್ಲ. ಜನರು ಕತ್ತಲಲ್ಲಿ ನಡೆಯುತ್ತಾ ಎಡವಿ ಬೀಳುತ್ತಾರೆ, ಎಲುಬು ಮುರಿಯುತ್ತದೆ, ಚಿಕಿತ್ಸೆಗಾಗಿ ಅಲ್ಲಿ hospital ಇಲ್ಲ. Local barber

ಅವನಿಗೆ ಕಾಲನ್ನು ಸೆಟ್ ಮಾಡುತ್ತಾನೆ. ಇಂತಹ ಪರಿಸ್ಥಿತಿ ಆಗಿದೆ. ಅದಕ್ಕೆ ನನ್ನ ಮನವಿಯೇನೆಂದರೆ ಎಲ್ಲಾ ಸ್ಕೂಲ್ಸ್‌ನಲ್ಲಿ ಒಂದು ಡಿ.ಜಿ.ಸೆಟ್ ಕೊಡಬೇಕು.It should be there, either solar or D,G,Set. ಏಕೆಂದರೆ let their school also become library. ಸಂಪೂರ್ಣ ಸ್ಕೂಲಿಗಲ್ಲದಿದ್ದರೂ at least one room should be dedicated with D.G.Set, so that ನಮ್ಮ ಮಕ್ಕಳಿಗೆ ಅಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. Library ಮಾಡಬೇಕು. ಅದು ನನ್ನ request ಏಕೆಂದರೆ our future is our children. ನಾವು ಎಲ್ಲಾ ಕೆಲಸ ಮಾಡುವುದು ನಮ್ಮ ಮಕ್ಕಳ ಭವಿಷ್ಯಕ್ಕಾಗಿಯೇ. ರಾಜ್ಯದ ಎಲ್ಲಾ ಭಾಗಗಳಿಂದ ಬಂದಿರುವ ಇಲ್ಲಿರುವ ಎಲ್ಲರಿಗೂ ನನ್ನದೊಂದು ಪ್ರಶ್ನೆ ಇದೆ. ಬೀದರ್ ದಕ್ಷಿಣ ಕ್ಷೇತ್ರದವರಾದ ನಾವೂ ಸಹ ಕನ್ನಡ ತಾಯಿಯ ಮಕ್ಕಳು, ನಮ್ಮದು ಏಕೆ step child, ತರಹ treat ಮಾಡುತ್ತೀರಿ? ನಮಗೇಕೆ ಫಂಡ್ಸ್ ಸಿಗುವುದಿಲ್ಲ? ನಮಗೇಕೆ development ಸಿಗುತ್ತಿಲ್ಲ? ನಮ್ಮ ರಸ್ತೆಗಳೇಕೆ ಹೀಗಿವೆ? ಬೆಂಗಳೂರಿನಲ್ಲಿ ಎಲ್ಲಾ first class roads ಇವೆ. ನಮ್ಮ ಹತ್ತಿರ ರೋಡ್ಸ್ ಇಲ್ಲ.

ಕಾರಂಜಾ ಡ್ಯಾಂ ಬಗ್ಗೆ ಒಂದು ಹೇಳುತ್ತೇನೆ. ಈ ಸಂಬಂಧ ಹೈಕೋರ್ಟ್ ತೀರ್ಪು ಬಂದಿದೆ. Land acquisition cost judgement ಬಂದಿದೆ. ಜನವರಿಯಲ್ಲಿ judgement ಬಂತು, Within 60 days government should pay the compensation. ಕ್ಯಾಬಿನೆಟ್‌ನಲ್ಲೂ ಚರ್ಚೆ ಬಂತು. But that compensation has not been paid yet to the people. They have given them Rs.1.5 to 2 thousand per acre of land. And there is no facility for them where they have been rehabilitated. How can they bring up their families? ಯಾರು ಶ್ರೀಮಂತರಿದ್ದರೋ, ಯಾವ family ಚೆನ್ನಾಗಿ ಇತ್ತೋ ಅವರದೆಲ್ಲಾ ಲ್ಯಾಂಡ್ ಕಾರಂಜಾ ಯೋಜನೆಯಲ್ಲಿ ಹೋಗಿ ಅವರೆಲ್ಲ ರಸ್ತೆಯ ಮೇಲೆ ಬಂದು ಬಿಟ್ಟಿದ್ದಾರೆ. ಅದಕ್ಕೆ ನನ್ನ compassion ಇದೆ. ನನ್ನ request ಏನಿದೆಯೆಂದರೆ, ಯಾವ ತೀರ್ಪು ಹೈಕೋರ್ಟ್ ಕೊಟ್ಟಿದೆ, that should be implemented by the

Revenue Department immediately. Social justice is not only required for the Scheduled Caste and Scheduled Tribe people, but required for all the children of Karnataka ತಾಯಿ. ನಮಸ್ಕಾರ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಮಂಡಿಸುವುದರ ಮೂಲಕ ತನ್ನ ಗುರಿಗಳನ್ನು, ಉದ್ದೇಶಗಳನ್ನು ಹೇಳುವುದಕ್ಕೆ ನೂತನ ಸರ್ಕಾರ ಪ್ರಯತ್ನ ಮಾಡಿದ್ದಾರೆ. ಆದರೆ ಈ ಭಾಷಣ ನನಗೆ ಅನಿಸಿರುವ ಪ್ರಕಾರ ಕೇವಲ ಸಾಂಪ್ರಾದಾಯಿಕವಾದ ಭಾಷಣ ಮತ್ತು ಸಾಂಕೇತಿಕವಾದ ಪ್ರಯತ್ನವೆಂದು ನಾನು ಭಾವಿಸಿದ್ದೇನೆ. ಹಿಂದೆ ಇದ್ದ ಬಿ.ಜೆ.ಪಿ. ಸರ್ಕಾರ ಕೂಡೆ ಮಾನ್ಯ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸಿತ್ತು. ಬಜೆಟ್ ಕೂಡ ಮಂಡನೆಯಾಗಿದೆ. ಪುನಃ ಹೊಸ ಸರ್ಕಾರ ಎನ್ನುವ ಕಾರಣಕ್ಕಾಗಿ ಈ ನೂತನ ಸರ್ಕಾರ ಈ ಕೆಲಸವನ್ನು ಮಾಡಿದೆ. ಮಾಡುವಂತಹ ಸಂದರ್ಭದಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. ಜನತೆ ಬದಲಾವಣೆಯನ್ನು ಬಯಸಿದ್ದಾರೆ ಅದು ಕೇವಲ ಬದಲಾವಣೆ ಮಾತ್ರ ಅಲ್ಲ. ಎಲ್ಲರ ಕಣ್ಣಿಗೆ ಕಾಣುವಂತಹ ಬದಲಾವಣೆಯನ್ನು ತರುವುದು ನನ್ನ ಸರ್ಕಾರದ ಉದ್ದೇಶ. ಬಹುಶಃ ನಾವು ಹಲವಾರು ಸರಕಾರಗಳನ್ನು ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ನೋಡಿದ್ದೇವೆ. ವಿಶೇಷವಾಗಿ ಎಲ್ಲರ ಕಣ್ಣಿಗೆ ಕಾಣುವಂತಹ ಬದಲಾವಣೆಯನ್ನು ನಾವು ನೋಡಬೇಕಾಗಿದೆ. ಯಾವ ಬದಲಾವಣೆಯನ್ನು ತರುತ್ತಾರೆ? ಇವತ್ತು ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ? ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿ ಹೇಗಿದೆ? ಇವುಗಳನ್ನು ಬದಲಾವಣೆ ಮೂಲಕ ಹೇಗೆ ತರುತ್ತಾರೆಂಬುದನ್ನೂ ಕೂಡ ನಾವು ನೋಡಬೇಕಾಗಿದೆ. ಸಾಮಾನ್ಯವಾಗಿ ಸರ್ಕಾರಗಳು ಯೋಜನೆಗಳನ್ನು ಕಾರ್ಯಕ್ರಮಗಳನ್ನು ಪ್ರಕಟಿಸುತ್ತವೆ. ಆದರೆ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಪ್ರಕಟಿಸುವುದರಲ್ಲೇ ಕಾಲಕಳೆಯುತ್ತೇವೆಯೇ ಹೊರತು ಯಾವುದೇ ಕಾರ್ಯಕ್ರಮಗಳು ಕೂಡ ಇಲ್ಲಿಯವರೆಗೆ ಸಂಪೂರ್ಣವಾಗಿ ಜಾರಿಯಾಗಿರುವುದನ್ನು ಮತ್ತು ಬಡವರಿಗೆ ತಲುಪಿರುವುದನ್ನು ನಾವು ನೋಡಿಲ್ಲ. ಟಿ.ವಿ. ಮಾಧ್ಯಮಗಳಿರಬಹುದು ವೃತ್ತಪತ್ರಿಕೆಗಳಿರಬಹುದು ಇವುಗಳನ್ನು ನಾವು ನೋಡುತ್ತೇವೆ. ಪರಿಶಿಷ್ಟ ಜಾತಿಯವರಿಗೆ ಅಲ್ಪಸಂಖ್ಯಾತರಿಗೆ ಹಾಗೂ ಹಿಂದುಳಿದ

ವರ್ಗದವರಿಗೆ ಇಷ್ಟಿಷ್ಟು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಸರ್ಕಾರ ಹೇಳುತ್ತದೆ. ಯಾವುದೇ ಸರ್ಕಾರ ಹಣವನ್ನು ನಿಗದಿಪಡಿಸುವುದರಿಂದ ಮಾತ್ರ ಸಮಸ್ಯೆಗಳು ಬಗೆಹರಿಯುವುದಿಲ್ಲ. ಆ ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ, ಬಿಡುಗಡೆಯಾಗಿರುವು ಹಣ ಎಷ್ಟು ಖರ್ಚಾಗಿದೆ. ಅದು ಫಲಾನಿಭವಿಗಳಿಗೆ ಸರಿಯಾಗಿ ತಲುಪಿದೆಯೋ ಇಲ್ಲವೋ ಎಂಬುದನ್ನು ಕೂಡ ನಾವು ನೋಡಬೇಕಾಗಿದೆ. ದುರಾದೃಷ್ಟವಶಾತ್ ಇವತ್ತಿನ ಸರ್ಕಾರಗಳು ಕೂಡ ಬಹಳ ಹಳೆಯ ಕಾರ್ಯಕ್ರಮಗಳನ್ನು, ನಮ್ಮ ನಾಯಕರಾದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೆಗೌಡರನ್ನು ಅವರು ಹಾಕಿಕೊಟ್ಟಿರುವಂತಹ ಕಾರ್ಯಕ್ರಮಗಳನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. 1983ರಲ್ಲಿ ಅವರು ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾಗಿದ್ದಂತಹ ಕಾಲದಲ್ಲಿ ಮೊಟ್ಟಮೊದಲ ಬಾರಿಗೆ ಪರಿಶಿಷ್ಟ ಜಾತಿ ವರ್ಗದವರಿಗೆ ಅವರು ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಕೊರೆದು ಅವರಿಗೆ ಅರ ಜಮೀನಿನಲ್ಲಿ ನೀರನ್ನು ಕೊಡುವ ಮೂಲಕ ಅವರು ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಪ್ರಗತಿ ಸಾಧಿಸುವುದರತ್ತ ಮೊದಲ ಹೆಜ್ಜೆಯನ್ನಿಟ್ಟರು. ಅದಕ್ಕಿಂತ ಮೊದಲು ಅನೇಕ ಕಾಂಗ್ರೆಸ್ ಸರ್ಕಾರಗಳು ಹಾಗೂ ನಂತರ ಬಂದಂತಹ ಸರ್ಕಾರಗಳು ಕೇವಲ ಕಣ್ಣೊರೆಸುವ ಮೂಲಕ ಮತ ಬ್ಯಾಂಕಿಗಾಗಿ ಪ್ರಯತ್ನ ಮಾಡಿದ್ದಾರೆಯೇ ಹೊರತು ಪ್ರಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ನಾನು ಮೊದಲು ಮತ್ತು ಎರಡನೇ ಬಾರಿ ಆಯ್ಕೆಯಾದಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಕಲ್ಯಾಣ ಸಮಿತಿಯಲ್ಲಿ ನಾನು ಅಧ್ಯಕ್ಷನಾಗಿ ಮತ್ತು ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮೀನುಗಾರಿಗೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸೈಕಲ್ ಮತ್ತು ಬಲೆಗಳನ್ನು ಕೊಡುವಂತಹ ಒಂದು ಸ್ಕೀಮ್ ಇದೆ. ಮಾನ್ಯ ಹಾಲಿ ಲೋಕೋಪಯೋಗಿ ಸಚಿವರು, ನಾವೆಲ್ಲಾ ಕೂಡ ಸದಸ್ಯರಾಗಿದ್ದೆವು. ಆದರೆ ಪರಿಶಿಷ್ಟ ಜಾತಿಯವರ ಸ್ವಾಭಿಮಾನವನ್ನು ಕಾಪಾಡುವ ದೃಷ್ಟಿಯಿಂದ ಸ್ವಾಭಿಮಾನಿ ಕಾರ್ಯಕ್ರಮವನ್ನು ಕೊಡುವ ದೃಷ್ಟಿಯಿಂದ ಸೈಕಲ್ ಮತ್ತು ಬಲೆಗಳನ್ನು ಕೊಡುವುದು ಬಹುಶಃ ಅವರ ಸ್ವಾಭಿಮಾನವನ್ನು ಕೆಣಕುವಂತಹ ಪ್ರಶ್ನೆ ಅದು. ಅದು ಬೇಕಾಗಿಲ್ಲ. ಆರ್ಥಿಕವಾಗಿ ಬೇರೆ ರೀತಿಯಲ್ಲಿ ಅವರನ್ನು ನೋಡಿಕೊಂಡರೆ ಅವರೇ ಸೈಕಲ್ ಮತ್ತು ಬಲೆಗಳನ್ನು ತೆಗೆದುಕೊಳ್ಳುತ್ತಾರೆ. ನಾನೇಕೆ ಈ ಮಾತನ್ನು

ಹೇಳುತ್ತಿದ್ದೇನೆಂದರೆ, ಸರ್ಕಾರದ ಕಣ್ಣೊರೆಸುವ ಮತ್ತು ಜನಪ್ರಿಯತೆಗಾಗಿ ಮಾಡುವಂತಹ ಇಂತಹ ಕಾರ್ಯಕ್ರಮಗಳು ನಿಲ್ಲಬೇಕು. ನಮ್ಮ ಸರ್ಕಾರ ಪರಿಶಿಷ್ಟ ಜಾತಿಯವರು ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಬದ್ಧವಾಗಿದೆ. ಆರೋಗ್ಯ, ಉದ್ಯೋಗ, ಶಿಕ್ಷಣ, ಪೌಷ್ಟಿಕಾಂಶಗಳ ಆಹಾರಗಳ ಪೂರೈಕೆಗೆ ಸಂಬಂಧಿಸಿದಂತೆ ಸಂವಿಧಾನ ಮತ್ತು ಕಾನೂನು ಪ್ರಕಾರ ಹೊಂದಿರುವ ಹಕ್ಕುಗಳನ್ನು ನಿರ್ಭಿಡೆಯಿಂದ ರಕ್ಷಿಸಲಾಗುವುದೆಂಬ ಅನೇಕ ಚಂದದ ಮಾತುಗಳನ್ನು ಹೇಳಿದ್ದಾರೆ. ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ನಾವು ತುಂಬುತ್ತೇವೆನ್ನುವಂತಹ ಸ್ವಾಗತಾರ್ಹ ಹೇಳಿಕೆಯನ್ನು ಕೊಟ್ಟಿದ್ದೀರಿ. ಮಧ್ಯ ಅದು ನಿಂತಿತ್ತು. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದು ಕೇವಲ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಹೇಳುವಂತಹ ಹೇಳಿಕೆಯಾಗಬಾರದು. ಸಮಾಜ ಕಲ್ಯಾಣ ಇಲಾಖೆಯ ಸಚಿವರು ಇಲ್ಲೇ ಇದ್ದಾರೆ. ಡಿ.ಪಿ.ಎ.ಆರ್. ಮತ್ತು ತಾವೆಲ್ಲರೂ ಕೂಡ ಸೇರಿ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಮತ್ತು ಮುಂಬಡ್ತಿ ಕೊಡುವಂತಹ ಕೆಲಸಗಳನ್ನು ಮಾಡಬೇಕೆನ್ನುವಂತಹ ಒತ್ತಾಯವನ್ನು ಕೂಡ ಮಾಡುತ್ತಾ ನನ್ನ ಸರ್ಕಾರ ಕೇವಲ ಸಾಮಾಜಿಕ ಕ್ಷೇತ್ರಕ್ಕೆ ಮಾತ್ರ ಅಲ್ಲ ಅಭಿವೃದ್ಧಿ ಕ್ಷೇತ್ರಕ್ಕೂ ಕೂಡ ಪ್ರಾಮುಖ್ಯತೆಯನ್ನು ಕೊಡುತ್ತದೆಂಬ ಮಾತನ್ನು ಹೇಳುತ್ತಿದ್ದಾರೆ. ಆದರೆ ಇವತ್ತು ಅಭಿವೃದ್ಧಿ ಪಥದಲ್ಲಿರುವಾಗ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಸಮಸ್ಯೆ, ವಿದ್ಯುತ್ ಸಮಸ್ಯೆ ಇದೆ. ಇಷ್ಟೆಲ್ಲಾ ಸಮಸ್ಯೆಗಳನ್ನು ನೀವು ಹೇಗೆ ನಿಭಾಯಿಸುತ್ತೀರಿ? ದುರದೃಷ್ಟವಶಾತ್ ಎರಡು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಮಳೆಯಾಗಿಲ್ಲ. ರಾಜ್ಯದ 158 ತಾಲ್ಲೂಕುಗಳಲ್ಲಿ ಬರವಿದೆ. ನನ್ನ ಕ್ಷೇತ್ರವಾದ ಸಕಲೇಶಪುರ ಸೇರಿದಂತೆ ಅನೇಕ ಮಲೆನಾಡು ಭಾಗಗಳ ಜಿಲ್ಲೆಗಳಲ್ಲೂ ಕೂಡ ಬರ ಕಾಲಿಟ್ಟಿದೆ. ಸಾಮಾನ್ಯವಾಗಿ ಎಲ್ಲರೂ ಕೂಡ ಮಲೆನಾಡು ಭಾಗದಲ್ಲಿ ತುಂಬಾ ನೀರಿದ್ದು, ನೀರಿಗೆ ಬರವಿಲ್ಲವೆಂದು ಭ್ರಮಿಸುತ್ತಾರೆ. ಆದರೆ ಆಲ್ಲೂ ಕೂಡ 1000–1200 ಅಡಿಗಳಷ್ಟು ಆಳಕ್ಕೆ ಕೊಳವೆ ಭಾವಿಗಳನ್ನು ತೊಡುವಂತಹ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಸರ್ಕಾರ ಸಾಕಷ್ಟು ಹಣವನ್ನು ಕೊಟ್ಟಿದೆಯೆಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಆ ಹಣ ಸಾಕಾಗುವುದಿಲ್ಲ. ಕುಡಿಯುವ ನೀರಿಗೆ ಪ್ರತಿ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಾನು ಈಗಾಗಲೇ ಒತ್ತಾಯ ಮಾಡಿದ್ದೇನೆ.

ನೈಸರ್ಗಿಕ ಜಲಧಾರೆಯ ಮೂಲಕ ವಿಶೇಷವಾಗಿ ಮಲೆನಾಡು ಭಾಗಕ್ಕೆ ನೀರನ್ನೇನು ಕೊಡುತ್ತೇವೆಯೋ ಆ ಪ್ರಕ್ರಿಯೆ ಇನ್ನೂ ಹೆಚ್ಚು ಚುರುಕಾಗಬೇಕೆಂಬ ಮಾತನ್ನು ಹೇಳುತ್ತಾ, ಆರೋಗ್ಯ ಕ್ಷೇತ್ರಕ್ಕೆ ಸರ್ಕಾರ ಹೆಚ್ಚು ಗಮನವನ್ನು ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನನ್ನ ಮತಕ್ಷೇತ್ರದ National Highway ಯಲ್ಲಿರುವ ಆಸ್ಪತ್ರೆಯಿದೆ. ಇದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೂ ತಿಳಿದಿದೆ. 11 ಜನ ವೈದ್ಯರಿರಬೇಕಾದ ಕಡೆಯಲ್ಲಿ ಕೇವಲ 4 ಜನ ಮಾತ್ರ ವೈದ್ಯರಿದ್ದಾರೆ. National Highway ಆಸ್ಪತ್ರೆಯಾಗಿದ್ದು ಅಲ್ಲಿ ಸರ್ಜನ್ ಇಲ್ಲ, Anaesthesia, Physician ಇಲ್ಲ. Gynaecologistಇರಲಿಲ್ಲ, ಇತ್ತೀಚೆಗೆ ಶ್ರಮಪಟ್ಟು ಕರೆಸಿದ್ದೇವೆ. ಮಾನ್ಯ ಆರೋಗ್ಯ ಸಚಿವರು ಇಲ್ಲೇ ಇದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇವತ್ತು ಅತೀವವಾಗಿದೆ. ಇದರಲ್ಲಿ ತಪ್ಪೇನಾಗಿದೆಯೆಂದರೆ ವೈದ್ಯರಿಗೆ ಯಾವ್ಯಾವ ಸ್ಥಳ ಬೇಕೆಂದು ಅವರಿಗೆ ಬಿಟ್ಟಿದ್ದೇವೆ, ಕೌನ್ಸೆಲಿಂಗ್ ಮುಖಾಂತರ ವರ್ಗಾವಣೆ ಆಗುತ್ತಿದೆ. ಆದ್ದರಿಂದಲೇ ಎಲ್ಲಿಗೆ ಬೇಕೋ ಅಲ್ಲಿ ವೈದ್ಯರು ಸಿಗುತ್ತಿಲ್ಲ. ಅದಕ್ಕಾಗಿಯೇ ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಹಿಂದೆ ನಿಯೋಜನೆ ಪದ್ಧತಿ ಇತ್ತು. ವೈದ್ಯರಿರಬಹುದು, ಪ್ಯಾರಾ ಮೆಡಿಕಲ್ ಸಿಬ್ಬಂದಿಯಿರಬಹುದು, ನಿಯೋಜನೆ ಆಧಾರದ ಮೇಲೆ ಮಾಡುತ್ತಿದ್ದರಿಂದ ಎಲ್ಲವೂ ಸರಿಯಾಗಿತ್ತು. ಆ ಪದ್ಧತಿಯನ್ನು ರದ್ದುಮಾಡಿ, ವೈದ್ಯರೇ ಕೌನ್ಸಿಲಿಂಗ್ ಮುಖಾಂತರ ಹೋಗುವ ಹಾಗೆ ಮಾಡಿದ್ದೀರಿ. ದಯವಿಟ್ಟು ಅದನ್ನು ನಿಲ್ಲಿಸಿ ವರ್ಗಾವಣೆ ಪ್ರಾರಂಭ ಮಾಡಿ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಆ ಪದ್ಧತಿ ಇದ್ದಾಗಲೂ ಸಹ ವೈದ್ಯರ ಸಮಸ್ಯೆ ಬಗೆಹರಿದಿರಲಿಲ್ಲ, ಇನ್ನೂ ಹೆಚ್ಚಾಗಿತ್ತು. ಏಕೆಂದರೆ ನಿಯೋಜನೆ ಯಾವ ಜಾಗಕ್ಕೆ ಬೇಕೆಂದು ಬೇರೆ ಬೇರೆ ಇತ್ತಡಗಳ ಮೂಲಕ ಬಂದಂತಹ ಸಂದರ್ಭದಲ್ಲಿ, ಹತ್ತಿರವಿರುವ ಅವರಿಗೆ ಅನುಕೂಲವಾಗುವ ಸ್ಥಳಗಳಿಗೆ ಹೋಗಿ, ಗ್ರಾಮೀಣ ಮಟ್ಟದಲ್ಲಿ ಯಾರೊಬ್ಬರೂ ಹೋಗುವುದಕ್ಕೆ ತಯಾರಿರಲಿಲ್ಲ, ಈಗ ನಾವು ಮಾಡಿರುವ ಕೌನ್ಸೆಲಿಂಗ್ ಪದ್ಧತಿಯಲ್ಲಿ ಅವರು ಬೇಕಾದ ಕಡೆ ಕೊಡುವುದಕ್ಕೆ ಸಾಧ್ಯವಿರುವುದಿಲ್ಲ. ಕ್ರಿಟಿಕಲ್ ಏರಿಯಾ ಎಂದು ಮಾಡಿದ್ದೇವೆ. ಉದಾಹರಣೆಗೆ ಒಂದು ಭಾಗದಲ್ಲಿ 10 ಜನ ವೈದ್ಯರಿರಬೇಕಾದ ಜಾಗದಲ್ಲಿ ಅದರರ್ಧ 50% ಅಂದರೆ 5 ಜನಕ್ಕಿಂತ ಕಡಿಮೆ ವೈದ್ಯರಿದ್ದರೆದ, ಅಂತಹ ಕಡೆಗಳಲ್ಲಿ ಮೊದಲು ಕಳುಹಿಸಬೇಕಾತ್ತದೆ. ಇತ್ತೀಚೆಗೆ

ನಡೆದ ಕೌನ್ಸೆಲಿಂಗ್‌ನಲ್ಲಿ 50% ಗಿಂತ ಕಡಿಮೆ ವೈದ್ಯರಿರುವ ಕಡೆಯಲ್ಲಿ ಮಾತ್ರ ತೋರಿಸುವಂತಹ ಕೆಲಸ ಮಾಡಿದೆವು. 260 ಹುದ್ದೆಗಳು ಖಾಲಿಯಿದ್ದರೂ 59ನ್ನು ಮಾತ್ರ ತೋರಿಸಿತ್ತಾರೆ. ಯಾವ ಕ್ರಿಟಿಕಲ್ ಏರಿಯಾದಲ್ಲಿ 50% ಗಿಂತ ಕಡಿಮೆ ಇರುವ ಜಾಗಕ್ಕೆ ಕಳುಹಿಸುವಂತೆ ಆದೇಶ ಕೊಟ್ಟಿದ್ದೇವೆ. ಇತರೆ ಏನಾದರೂ ಹೆಚ್ಚು ಕಡಿಮೆಯಿದ್ದರೆ ನಿಮ್ಮ ಸಲಹೆ ಸೂಚನೆ ಮೇರೆಗೆ ಮುಂದುವರೆಸಿಕೊಂಡು ಹೋಗೋಣ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ತಮಗೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಸಕಲೇಶಪುರಲ್ಲಿರುವ ಕ್ರಾಫೆಡ್ ಆಸ್ಪತ್ರೆಯಲ್ಲಿ ಮಂಜೂರಾತಿ ಹುದ್ದೆ 105, ಇರತಕ್ಕಂಥವು 38, ಖಾಲಿ 67. ನಾನು ನಿಮಗೆ ಸ್ಥಿತಿಯನ್ನು ವಿವರಿಸುತ್ತಿದ್ದೇನೆ. ತಮಗೆ ಈಗಾಗಲೇ 7 ಡಾಕ್ಟರ್‌ಗಳ ಹುದ್ದೆ ಖಾಲಿ ಇದೆ ಎಂದು ಹೇಳಿದೆ. ಇರತಕ್ಕಂಥ 33 ನಾಲ್ಕನೇ ದರ್ಜೆ ನೌಕರರಲ್ಲಿ 10 ಮಾತ್ರ ಇದೆ. 23 ಹುದ್ದೆ ಖಾಲಿ ಇದೆ. Dental chair ಅನ್ನು, apparatus ಅನ್ನು ಡಾಕ್ಟರೇ clean ಮಾಡಿಕೊಳ್ಳಬೇಕು. ಆ ರೀತಿಯಲ್ಲಿ ಪರಿಸ್ಥಿತಿ ಇದೆ. ತಾವು ನಿಮ್ಮ ಕ್ಷೇತ್ರವಾದ ಮಂಗಳೂರಿಗೆ ಹೋಗುತ್ತಿರುತ್ತೀರಿ. ದಯಮಾಡಿ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ನೋಡಲು ಅಲ್ಲಿಗೆ visit ಮಾಡಿ. ಎಲ್ಲಾ ವಿಭಾಗದಲ್ಲೂ ಇದೇ ಪರಿಸ್ಥಿತಿ ಇದೆ. ದಯಮಾಡಿ ಅಲ್ಲಿಗೆ ವೈದ್ಯರನ್ನು ಕೊಡಿ. Paramedical men ಕೊಡಿ. Trauma centre ನ್ಯಾಷನಲ್ ಹೈವೇ. ಮಂಗಳೂರು ಮತ್ತು ನಮ್ಮ ಹಾಸನ, ಬೆಂಗಳೂರು ಮಧ್ಯ ಸಕಲೇಶಪುರದ ಪಶ್ಚಿಮಘಟ್ಟ ಪ್ರದೇಶದಲ್ಲಿ accident ಗಳು ಹೆಚ್ಚಾಗುತ್ತಿರುತ್ತವೆ. ಅಲ್ಲಿಗೆ ಒಂದು Trauma centre ಕೊಟ್ಟರೆ ಅನೂಕುಲವಾಗುತ್ತದೆಂದು ಒತ್ತಾಯವನ್ನು ಮಾಡುತ್ತೇನೆ. ಹಿಂದೆ ನಮ್ಮ ಹಾಲಿ ವಿರೋಧಪಕ್ಷದ ನಾಯಕರು ಮುಖ್ಯಮಂತ್ರಿಗಳು ಆಗಿದ್ದಂಥ ಕಾಲದಲ್ಲಿ ಈ ರಾಜ್ಯಕ್ಕೆ ಪ್ರಾಥಮಿಕವಾದಂಥ ಅಗತ್ಯತೆಗಳು ಏನಿದೆ, ಅಂದರೆ ಶಾಲೆ ಇರಬಹುದು, ಕಾಲೇಜು ಇರಬಹುದು, ಆಸ್ಪತ್ರೆಗಳನ್ನು ಮಂಜೂರು ಮಾಡಿದರು. ನನ್ನ ಕ್ಷೇತ್ರದಲ್ಲಿ ಮಂಜೂರಾದ ಆಸ್ಪತ್ರೆಗಳಲ್ಲಿ ನಾವು ಮೂರನ್ನು ಕೊಡುವುದಕ್ಕೆ ಆಗಲ್ಲಿಲ್ಲ. ಒಂದು ಲಕ್ಷ ರೂಪಾಯಿ ಹಣ ಕಟ್ಟಬೇಕು, ಜಮೀನು ಕೊಡಬೇಕು ಇದು ಸರ್ಕಾರದ condition ಆಗಿತ್ತು. ಹಳ್ಳಿಗಳಲ್ಲಿ ರೈತರಿಗೆ ಆರ್ಥಿಕ ಸಂಕಷ್ಟವಿರುವುದು ತಮಗೆ

ಗೊತ್ತಿದೆ. ಇವತ್ತು ಹಣ ಕಟ್ಟಲಿಲ್ಲ, ಜಮೀನು ಕೊಡಲಿಲ್ಲವೆಂದು ಮೂರು ಆಸ್ಪತ್ರೆಗಳು ವಾಪಸ್ಸು ಹೋದವು. ವಾಪಸ್ಸು ಹೋದಾಂಥವನ್ನು ನಮ್ಮ ಮಾನ್ಯ ಲಿಂಬಾವಳಿಯವರು ಮಂತ್ರಿಯಾಗಿದಂಥ ಕಾಲದಲ್ಲಿ ಆ ಆಸ್ಪತ್ರೆಗಳನ್ನು ಬೇರೆ ಕಡೆ ಮಂಜೂರು ಮಾಡಿದರು. ಆಸ್ಪತ್ರೆಗಳು ಮಂಜೂರು ಆದಮೇಲೆ ನಾವು ತಡವಾಗಿ ಹಣವನ್ನು ಕಟ್ಟಿ ಎಲ್ಲಾ ವ್ಯವಸ್ಥೆಯನ್ನು ಮಾಡಿದೆವು. ಆಸ್ಪತ್ರೆಗಳು ವಾಪಸ್ಸು ಬರಲಿಲ್ಲ. ಆದ್ದರಿಂದ ತಮ್ಮಲ್ಲಿ ದಯಮಾಡಿ ಒತ್ತಾಯ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಆ ಮೂರು ಆಸ್ಪತ್ರೆಗಳು ಬೇಕು. ಕಟ್ಟಾಯ ಎಂದು ಹೋಬಳಿ ಕೇಂದ್ರವಿದೆ. ಅಲ್ಲಿ ಆಸ್ಪತ್ರೆ ಇಲ್ಲ. ಕನಿಷ್ಠ ಹೋಬಳಿ ಕೇಂದ್ರಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತೊಮ್ಮೆ ಮಂಜೂರು ಮಾಡತಕ್ಕ ಕೆಲಸವನ್ನು ಮಾಡಿ. ದಯಾಮಾಡಿ ಆ ಕೆಲಸ ಆಗಬೇಕು. ಕನಿಷ್ಠ ಹೋಬಳಿ ಕೇಂದ್ರಕ್ಕೆ ಕಡ್ಡಾಯವಾಗಿ ಒಬ್ಬರು ಪ್ರಸೂತಿ ವೈದ್ಯರು ಇರುವಂತೆ ಮಾಡಬೇಕು. ತಾವು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೀರಿ ಎಂಬ ಮಾತನ್ನು ಹೇಳಿ, ಇವತ್ತು ಸರ್ಕಾರದಲ್ಲಿ ಕೆಲಸಗಳು ಆಗಬೇಕಾಗಿದೆ. ಇವತ್ತು ಯೋಜನೆಗಳು ಸಾವಿರಾರು ಇದೆ. ಕಾರ್ಯಕ್ರಮಗಳು ಸಾವಿರಾರು ಇದೆ. ಕೆಲಸ ಮಾಡಲು ಜನ ಎಲ್ಲಿದ್ದಾರೆ? ತಮ್ಮ ಕ್ಷೇತ್ರದಲ್ಲಿ ಇದ್ದಾರೋ ಏನೋ ನನಗೆ ಗೊತ್ತಿಲ್ಲ. ಇವತ್ತು ರಾಜ್ಯದಾದ್ಯಂತ ಪ್ರತಿ ಇಲಾಖೆಯಲ್ಲಿ ಶೇಕಡ 40 ರಿಂದ 45 ಹುದ್ದೆಗಳು ಖಾಲಿ ಇದೆ. ಎಲ್ಲೂ ಕೆಲಸ ಮಾಡಲು ಆಗುತ್ತಿಲ್ಲ. ಕೃಷಿ ಇಲಾಖೆಯಲ್ಲಿ 16 ಜನ Agriculture Assistants ಇರಬೇಕು. ಆದರೆ ಇಬ್ಬರು ಇದ್ದಾರೆ. ಎಲ್ಲೂ ಕೂಡ ಕೆಲಸ ಆಗುತ್ತಿಲ್ಲ. ತಾವು ಕೃಷಿ ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೀರಿ. ಕೆಲಸ ಮಾಡುವವರು ಯಾರು? ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ cooks warden ಕೆಲಸ ಮಾಡುತ್ತಿದ್ದಾರೆ. ಇದೇ ರೀತಿ ಎಲ್ಲಾ ಇಲಾಖೆಯಲ್ಲಿ ಇದೆ. ದಯಾಮಾಡಿ ಸರ್ಕಾರ ಕಡ್ಡಾಯವಾಗಿ ಆದಷ್ಟು ಬೇಗ ಈ ಒಂದು ಹುದ್ದೆಗಳನ್ನು ತುಂಬಬೇಕು. ಸರ್ಕಾರದ ಕಾರ್ಯಕ್ರಮಗಳು ಸುಲಲಿತವಾಗಿ ಆಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ನಮ್ಮ ಮಲೆನಾಡು ಭಾಗದಲ್ಲಿ ತಮಗೆ ಗೊತ್ತಿದೆ, ಅನೇಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಕಾಡಾನೆ ಸಮಸ್ಯೆ ಇದೆ. 2ನೇ ಬಾರಿ ಆ ಭಾಗದ ಶಾಸಕನಾಗುತ್ತಿದ್ದೇನೆ. 5 ವರ್ಷಗಳಲ್ಲಿ ಸುಮಾರು 32 ಜನ ಸಾವೀಗಿಡಾಗಿದ್ದಾರೆ. ಆ ಜನ ಸಾವೀಗೀಡಾದಾಗ ಅವತ್ತಿನ ರೈತರ ಆಕ್ರೋಶವನ್ನು

ಯಾರೂ ಕೂಡ ಎದುರಿಸುವುದಕ್ಕೆ ಸಾಧ್ಯವಿಲ್ಲ. ಆ ಒಂದು ಸ್ಥಿತಿ ಅಲ್ಲಿ ನಿರ್ಮಾಣವಾಗಿತ್ತು.

ಹಿಂದಿನ ನಮ್ಮ ಜನ ಪ್ರತಿನಿಧಿಗಳು ಇರಬಹುದು, ನಾನು ಇರಬಹುದು, ನಮ್ಮ ಕೊಡಗಿನ ಭಾಗದ ಜನ ಎಲ್ಲರೂ ಹೋರಾಟ ಮಾಡಿದ್ದೆವು. ಕೊನೆಗೂ ಕೇಂದ್ರ ಸರ್ಕಾರ 25 ಕಾಡಾನೆಗಳನ್ನು ಹಿಡಿಯಲು ಒಪ್ಪಿಗೆಯನ್ನು ಕೊಟ್ಟಿತ್ತು. ನಾವು ಅದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಅದು ಆದಮೇಲೆ ಯಾರೋ ಪುಣ್ಯಾತ್ಮರು, ಪರಿಸರವಾದಿಗಳು, ವಕೀಲರು ಎಂದು ಹೇಳಿಕೊಂಡು ಹೈಕೋರ್ಟ್‌ನಲ್ಲಿ PIL ಹಾಕಿದರು. ಇಲ್ಲ ಆನೆಗಳನ್ನು ಸಂರಕ್ಷಿಸಬೇಕು, ಯಾವುದೇ ಕಾರಣದಿಂದ ಹಿಡಿಯಬಾರದು, ಸ್ಥಳಾಂತರಿಸಬಾರದು ಎಂಬವಾದವನ್ನು ಇಟ್ಟರು. ಅದರ ಆಧಾರದ ಮೇಲೆ ನಮ್ಮ ರಾಜ್ಯದ ಉಚ್ಚನ್ಯಾಯಾಲಯದವರು Task-force Committee ಎಂದು ಒಂದು ಕಮಿಟಿಯನ್ನು ಮಾಡಿದರು. ಕಮಿಟಿಯವರೂ ಕೂಡ ಆ ಭಾಗಕ್ಕೆ ಬಂದು ಅಲ್ಲಿನ ಪರಿಸ್ಥಿತಿಯನ್ನು ನೋಡಿ ಆನೆಗಳನ್ನು ಹಿಡಿಯಲೇಬೇಕು ಹಾಗೂ ಸ್ಥಳಾಂತರಿಸುವುದು ಒಳ್ಳೆಯದು ಎಂದು ವರದಿಯಲ್ಲಿ ಅಭಿಪ್ರಾಯ ಕೊಟ್ಟಿದ್ದಾರೆ. ಅಭಿಪ್ರಾಯ ಕೊಟ್ಟ ನಂತರ ಹೈಕೋರ್ಟ್ ಸರ್ಕಾರ ಏನು ಹೇಳುತ್ತದೆಂದು ಕೇಳಿತ್ತು.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಮಹತ್ವದ ವಿಚಾರಗಳನ್ನು ಚರ್ಚೆ ಮಾಡುತ್ತಿದ್ದಾರೆ. ನೋಟ್ ಮಾಡಿಕೊಳ್ಳುವುದಕ್ಕೆ ಒಬ್ಬ ಅಧಿಕಾರಿ ಇಲ್ಲ. ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ ಏತಕ್ಕಾಗಿ ಇಲ್ಲಿ ಭಾಷಣ ಮಾಡುವುದು? ಯಾರು ಬರೆದುಕೊಂಡಿದ್ದಾರೆ? ಬರೆದುಕೊಂಡಿದ್ದವರು ಒಬ್ಬರು ಅವರು ಯಾವ ಯಾವ points ಮಾತನಾಡಿದ್ದಾರೆಂದು ಎಂದು ಹೇಳಲಿ. ಒಬ್ಬರೂ ಇಲ್ಲವಲ್ಲ. ಮತ್ತೆ ಈ ಸದನವನ್ನು ಏತಕ್ಕಾಗಿ ನಡೆಸಬೇಕಾಗಿದೆ?

ಶ್ರೀ ಜಗದೀಶ್ ಶೆಟ್ಟರ್ : ಹೊಸ ಸರ್ಕಾರ ಬಂದಮೇಲೆ ಪರಿಸ್ಥಿತಿ ಹೀಗಿದೆ ಎಂದು ನನಗೆ ಗೊತ್ತಿರಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು) : ಇದ್ದೇವಲ್ಲಾ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಅವರು ಏನು ಹೇಳಿದ್ದಾರೆಂದು ತಾವೇ ಹೇಳಿಬಿಡಿ ನೋಡೋಣ. ಅಡಿಗೆ ಮಾಡುವ warden ಕೆಲಸ ಮಾಡುತ್ತಾರೆಂದು ಹೇಳಿದ್ದರು. ಅದನ್ನು ಯಾರಾದರೂ ಬರೆದುಕೊಂಡಿದ್ದಾರಾ? ತಾವು SC/ST ಜನಾಂಗದವರ ಹೆಸರಿನ ಮೇಲೆ ಅಧಿಕಾರಕ್ಕೆ ಬಂದವರಾಗಿದ್ದೀರಿ. ತಾವು SC/ST ಜನಾಂಗದವರನ್ನು ಇಷ್ಟು ನಿರ್ಲಕ್ಷ್ಯ ಮಾಡಿದರೆ ಹೇಗೆ? ಈ ಪರಿಸ್ಥಿತಿ ಏಕೆ? 5 ವರ್ಷದ ಕೊನೆಯಲ್ಲಿ ಈ ರೀತಿ ಇರಬೇಕು. ಆದರೆ ಇವತ್ತೇ ಕೆಳಗಡೆ ಬಂದರೆ ಹೇಗೆ?

(ಗೊಂದಲ)

ಶ್ರೀ ಡಾ.ಹೆಚ್.ಸಿ. ಮಹದೇವಪ್ಪ : ನಾವೆಲ್ಲಾ ಆಸಕ್ತಿಯಿಂದ ಕೇಳುತ್ತಿದ್ದೇವೆ.

ಶ್ರೀ ಗೋವಿಂದ ಎಂ.ಕಾರಜೋಳ : ಲೋಕೋಪಯೋಗಿ ಸಚಿವರಿಗೆ ಹೇಳುತ್ತೇವೆ. ತಮ್ಮ ಕಡೆ ಹೇಗಾಗಿದೆ ಎಂದರೆ, ಮದುಮಗಳು ಮದುವೆ ನಡೆಯಬೇಕಾದ ಮೊದಲೇ ದಿನವೇ widow ಆಗುವ ರೀತಿ ಆಗಿದೆ. ಏನು ಅರ್ಥ? ಯಾವ ಮಂತ್ರಿಗಳೂ ಇಲ್ಲ. ಶಾಸಕರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ಹೆಣ್ಣು ಜೀವನದಲ್ಲಿ ಯಾವತ್ತಾದರೂ window– ಆಗಬೇಕಾಗುತ್ತದೆ.!

ಶ್ರೀ ಗೋವಿಂದ ಎಂ.ಕಾರಜೋಳ : ಜೀವನದಲ್ಲಿ ಯಾವತ್ತಾದರೂ ಆಗಲಿ. 60 ವರ್ಷ, 70 ವರ್ಷ ಆದಮೇಲೆ widow ಆಗಲಿ! ಮೊದಲ ದಿನವೇ ಆಗುವುದು ಬೇಡ. ನೀವು ಅರ್ಥಮಾಡಿಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಕೆಲವು ಮಂತ್ರಿಗಳು ಇಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಮಾನ್ಯ ಕುಮಾರಸ್ವಾಮಿಯವರನ್ನು ಮಾತನಾಡಲು ಬಿಡಿ, ನಾವು ನೋಟ್ ಮಾಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ವಿಧಾನ ಪರಿಷತ್ತಿನಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೆ, ಇಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೆ ನೀವು ವಿಚಾರ ಮಾಡಿಬಿಡಿ. ಇಲ್ಲಿ ಮತ್ತು ಅಲ್ಲಿ 3–4 ಜನ ಮಾತ್ರ ಮಂತ್ರಿಗಳಿದ್ದಾರೆ. ಅಲ್ಲಿಯ ಪರಿಸ್ಥಿತಿಯೂ ಹೀಗೆಯೇ ಇದೆಯಲ್ಲವೇ? ಮೊದಲ ದಿನವೇ ಹೀಗಾದರೆ ಹೇಗೆ?

ಶ್ರೀ ಗೋವಿಂದ ಎಂ.ಕಾರಜೋಳ : ಮದುಮಗಳು ಮೊದಲನೆ ದಿನವೇ window ಆಗಬಾರದೆಂದು ಹೇಳಿದೆನಲ್ಲ? ನೀವು ಅರ್ಥಮಾಡಿಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೀವು ನಿಮ್ಮ ಸರ್ಕಾರ ಇದ್ದಾಗ ಈ ರೀತಿ ಉಪದೇಶ ಮಾಡಬೇಕಾಗಿತ್ತು. ಆಗ ಉಪದೇಶ ಮಾಡಿಲಿಲ್ಲ ಆದ್ದರಿಂದ ಪರಿಸ್ಥಿತಿ ಹೀಗಾಯಿತು.

(ಗೊಂದಲ)

ಅಧ್ಯಕ್ಷರು : ಮಾನ್ಯ ವೈ.ಎನ್. ರುದ್ರೇಶ್ ಗೌಡ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಕೆ, ಕುಮಾರಸ್ವಾಮಿ : ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸುವ ಬಗ್ಗೆ ನಿಮ್ಮ ಅಭಿಪ್ರಾಯ ಏನಿದೆ ಎಂದು ಸರ್ಕಾರಕ್ಕೆ ಹೈಕೋರ್ಟ್ ಇವತ್ತು ಕೇಳಿದೆ. ಮಾನ್ಯ ಸಭಾಧ್ಯಕ್ಷರೆ, ಹತ್ತು ತಿಂಗಳು ಆಯಿತು. ಹಳೇ ಸರ್ಕಾರ ಏಳು-ಎಂಟು ತಿಂಗಳು ಆಯಿತು. ಏಕೆ ಉದಾಸೀನ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ಸರ್ಕಾರ ತನ್ನ ಅಭಿಪ್ರಾಯವನ್ನು ಇದುವರೆಗೂ ಕೊಡುವುದಕ್ಕೆ ಆಗಿಲ್ಲ. ಪ್ರತಿನಿತ್ಯ ನನ್ನ ಭಾಗದ ಕೊಡಗಿನಲ್ಲಿ ಜನ ಸಾಯುತ್ತಿದ್ದಾರೆ. ಅವರು ಬಡವರು. ಅವರಿಗೆ 5 ಲಕ್ಷ ಕೊಟ್ಟರೆ ಸಾಕಾಗುತ್ತದೆಯೇ ಬೆಳೆ ನಾಶವಾಗಿದೆ. ಅನೇಕ ಕಡೆ ಸಾವಿರಾರು ಎಕರೆಯಲ್ಲಿ ಬೆಳೆಯನ್ನು ಬೆಳೆಯುತ್ತಿಲ್ಲ. ಬೆಳೆ ಬೆಳೆದರೆ ನಷ್ಟವಾಗುತ್ತದೆ. ಏನು ಬೆಳೆವಷ್ಟವಾಗುತ್ತದೆ ಅದನ್ನು ನಾವು ತುಂಬುವುದಿಲ್ಲ. ರೈತರು ದಯಮಾಡಿ ನಾವು ಅಲ್ಲಿಗೆ ಹೋಗುವುದಕ್ಕೆ, ಅಲ್ಲಿ ಹೋಗಿ ಕೇಳುವುದಕ್ಕೆ ಆಗುವುದಿಲ್ಲ, ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಶಾಲಾ ಮಕ್ಕಳು ಹೊರಗಡೆ ಶಾಲೆಗೆ ಬರುತ್ತಿಲ್ಲ, ರೈತರು ಈಚೆಗೆ ಬರುತ್ತಿಲ್ಲ. ಕೂಲಿ ಕಾರ್ಮಿಕರು ಬರುತ್ತಿಲ್ಲ. ಈ ಪರಿಸ್ಥಿತಿ ಇದ್ದಾಗ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಮಾನ್ಯ ಸಚಿವರು ಕಾಡಾನೆ ಸಮಸ್ಯೆ ಬಗ್ಗೆ ನಮ್ಮೆಲ್ಲರನ್ನೂ ಸಭೆಗೆ ಕರೆದಿದ್ದಾರೆ. ಸಭೆ ಕರೆದಿರುವುದು ಸ್ವಾಗತಾರ್ಹ, ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಿ ತಕ್ಷಣ ನ್ಯಾಯಾಲಯಕ್ಕೆ ತನ್ನ ಅಭಿಪ್ರಾಯವನ್ನು ತಿಳಿಸಬೇಕೆಂಬ ಮಾತನ್ನು ಹೇಳುತ್ತಾ, ಇದೇ ಸಂದರ್ಭದಲ್ಲಿ ಆನೆ ಕಾರಿಡಾರ್ ಅನ್ನು ಸ್ಥಾಪಿಸಬೇಕೆನ್ನುವ ಒಂದು ಅಭಿಪ್ರಾಯ ಇದೆ. ಅಲ್ಲಿ ಸ್ಥಳೀಯವಾಗಿ ಏನು ಮಾಡಿದ್ದಾರೆಂದರೆ ಇವತ್ತು ಆನೆ ಕಾರಿಡಾರ್‌ನ್ನು ಸ್ಥಾಪಿಸುತ್ತೇವೆಂದು ರೈತರು

ಜಮೀನಿನಲ್ಲಿ ಏನೂ ಕೆಲಸ ಮಾಡುವಂತಿಲ್ಲ, ಅವರೆಲ್ಲಾ ಭಯಭೀತರಾಗಿದ್ದಾರೆ. ನಮ್ಮ ಊರಿನ ಜಮೀನು ಹೋಗುತ್ತದೆ, ನಮ್ಮ ಊರಿನ ಜಮೀನು ಹೋಗುತ್ತದೆ ಎನ್ನುವಂಥ ಹೊಸ ಸಮಸ್ಯೆಗಳು ಉದ್ಭವವಾಗಿದೆ, ಮೊದಲು 7 ಹಳ್ಳಿ ಎಂದು ಹೇಳಲಾಗಿತ್ತು, ನಂತರ 14 ಆಯಿತು ಈಗ 31ಕ್ಕೆ ತಂದು ನಿಲ್ಲಿಸಿದ್ದಾರೆ. ಇಂಥ ಕೆಲವು ವ್ಯತ್ಯಾಸಗಳೇನಿವೆ ಇದನ್ನೆಲ್ಲಾ ಸರ್ಕಾರ ಸರಿಪಡಿಸಬೇಕು.

ಇನ್ನು ಕೃಷಿ ಬಗ್ಗೆ ಹೇಳುತ್ತಾ, ಏಲಕ್ಕಿ ಬೆಳೆ ಬಗ್ಗೆ ನಾವು ಸದನದಲ್ಲಿ ಬಹಳಷ್ಟು ಸಾರಿ ಚರ್ಚೆ ಮಾಡಿದ್ದೇವೆ. ನಾನು ಈ ಸದನದಲ್ಲಿ ಧರಣಿಯನ್ನೂ ಸಹ ಮಾಡಿದ್ದೇನೆ. ಹಾಸನ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಈ 4 ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆಗೆ ಕುಕ್ಕೆ ಕಂದು ರೋಗ ತಗುಲಿ, ಸುಮಾರು 11 ಕೋಟಿ ರೂಪಾಯಿ ಬೆಳೆಗಾರರ ಮೇಲೆ ಸಾಲವಿದೆ. ಆ ಸಾಲವನ್ನು ಮನ್ನಾ ಮಾಡಿ ಎಂದು ಹಿಂದೆ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡರೂ ಸಹ ಪತ್ರ ಕೊಟ್ಟಿದ್ದರು. ಅನೇಕ ನಾಯಕರುಗಳೂ ಸಹ ಈ ಸಾಲ ಮನ್ನಾ ಮಾಡಿ, ಮನ್ನಾ ಮಾಡಿ ಎಂದು ಪತ್ರಗಳನ್ನು ಕೊಟ್ಟಿದ್ದಾರೆ. ಆದರೆ, ಅವರೇ ಅಧಿಕಾರಕ್ಕೆ ಬಂದಾಗ ಮಾತ್ರ ಸಾಲವನ್ನು ಮನ್ನಾ ಮಾಡಲಿಲ್ಲ. ನಾವು ಸದಾನಂದಗೌಡರ ಹತ್ತಿರ ಹೇಳಿಕೊಂಡೆವು. ಯಾರೂ ಮನ್ನಾ ಮಾಡಲಿಲ್ಲ. ಏತಕ್ಕಾಗಿ ಅಧಿಕಾರಕ್ಕೆ ಬಂದಾಗ ಆ ರೀತಿ ಉದಾಸೀನ ಮಾಡುತ್ತಾರೋ, ಅಧಿಕಾರ ಇಲ್ಲದಿದ್ದಾಗ ಒಂದು ರೀತಿ ಬೇಡಿಕೆ ಇಡುವುದು, ಅಧಿಕಾರ ಬಂದಾಗ ತಟ್ಟಸ್ಥ ರೀತಿಯಲ್ಲಿ ಇರುವಂಥ ಕೆಟ್ಟ ಪರಂಪರೆ ಮುಂದುವರೆಯುತ್ತಿದೆ. ಅದಕ್ಕಾಗಿ ಇವತ್ತು ಆ ಭಾಗದಲ್ಲಿ ರೈತರು ಏಲಕ್ಕಿ ಬೆಳೆ ಬೆಳೆಯುವುದನ್ನು ಬಿಟ್ಟು ಬಿಟ್ಟಿದ್ದಾರೆ. ಎಲ್ಲರೂ ನಷ್ಟಕ್ಕೊಳಗಾಗಿದ್ದಾರೆ. ಸರ್ಕಾರದಿಂದ 1 ಲಕ್ಷ ರೂಪಾಯಿ, 25,000 ರೂಪಾಯಿವರೆಗೆ ಸುಮಾರು 3,800 ಕೋಟಿ ರೂಪಾಯಿ ಸಾಲ ಮನ್ನಾ ಘೋಷಿಸಿದ್ದೀರಿ. ಅನೇಕ ತರಹದ ಸಾಲಗಳನ್ನು ಮಾನ್ಯ ಮುಖ್ಯಮಂತ್ರಿಯವರು ಪ್ರಮಾಣ ವಚನ ಸ್ವೀಕರಿಸಿದ ದಿನವೇ ಮನ್ನಾ ಮಾಡುವ ಬಗ್ಗೆ announce ಮಾಡಿದ್ದಾರೆ. ಇದು ಕೂಡಾ ರೈತರ ಸಾಲವೇ ಆಗಿದ್ದು, ಇದನ್ನು ಮನ್ನಾ ಮಾಡುವ ಬಗ್ಗೆ ನಾವು ಬೇಡಿಕೆಯನ್ನಿಟ್ಟಿದ್ದೇವೆ. ಮೊದಲಿನಿಂದಲೂ ರೈತರು ಹೋರಾಟ ಮಾಡಿದ್ದಾರೆ. ನಾನು ಸರ್ಕಾರಕ್ಕೆ ಇತ್ತಾಯ ಮಾಡುತ್ತಿದ್ದೇನೆ. ಹೆಚ್ಚೇನೂ ಅಲ್ಲ, ರೈತರ ಬೆಳೆ ನಷ್ಟವಾಗಿರುವುದು ಕೇವಲ 11 ಕೋಟಿ ರೂಪಾಯಿ ಸಾಲ. ಸರ್ಕಾರ ನಮ್ಮ

ಮಲೆನಾಡು ಭಾಗದ ಏಲಕ್ಕಿ ಬೆಳೆಗಾರರ ಪರವಾಗಿ ಬರಬೇಕೆಂದು ಒತ್ತಾಯ ಮಾಡುತ್ತಾ, ಈ ಸಾಲವನ್ನು ಕೂಡಾ ಮನ್ನಾ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಬೇಕು.

ಪ್ರವಾಸೋದ್ಯಮಕ್ಕೆ ತಾವು ಹೆಚ್ಚು ಒತ್ತು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೀರಿ. ನಿಜ ಅದು, ಆದರೆ, ಎಷ್ಟರ ಮಟ್ಟಿಗೆ ಅದನ್ನು ತಾವು ಮಾಡುತ್ತಿದ್ದೀರಿ? ವಿದೇಶಗಳಿಗೆ ಹೋದರೆ ಪ್ರವಾಸೋದ್ಯಮವೇ ಅಲ್ಲಿಯವರಿಗೆ ಒಂದು ಉದ್ಯಮವಾಗಿದೆ. ಮಾನ್ಯ ಛೇರ್‌ಮನ್‌ರವರೇ ತಾವು ಹಾಗೂ ನಾವುಗಳು ಕೂಡಾ ಒಟ್ಟಿಗೆ ವಿದೇಶಿ ಪ್ರವಾಸಗಳಿಗೆ ಹೋಗಿದ್ದೇವೆ. ಅಲ್ಲಿ ಆರ್ಥಿಕ ಪ್ರಗತಿಯನ್ನು ಕಾಣುವಂಥ, ಆರ್ಥಿಕ ಪ್ರಗತಿ ಉಂಟು ಮಾಡುವಂಥ, ಉದ್ಯೋಗ ಕೊಡುವಂಥ ಒಂದು ಆಕರ್ಷಣೀಯ ಉದ್ದಿಮೆ ಪ್ರವಾಸೋದ್ಯಮವಾಗಿದೆ. ಇವತ್ತು ಕರ್ನಾಟಕ ರಾಜ್ಯ ಆ ದೃಷ್ಟಿಯಲ್ಲಿ ಬೇರೆ ಯಾವುದೇ ವಿದೇಶಗಳಿಗಿಂತ ಏನೂ ಕಡಿಮೆಯಿಲ್ಲ. ಸರ್ಕಾರ ಸರಿಯಾಗಿ ಮನಸ್ಸು ಮಾಡಿದರೆ ನಮ್ಮಲ್ಲಿರುವಂಥ ಎಲ್ಲಾ ಪ್ರವಾಸಿ ಸ್ಥಳಗಳನ್ನು ಗುರುತು ಮಾಡಿ, ಪ್ರವಾಸೋದ್ಯಮದಿಂದ ಬಡವರಿಗೆ, ನಿರುದ್ಯೋಗಿಗಳಿಗೆ ಆರ್ಥಿಕವಾಗಿ ಉದ್ಯೋಗವನ್ನು ಕೊಡಬಹುದು. ಆ ನಿಟ್ಟಿನಲ್ಲಿ ಹೆಚ್ಚು ಚಿಂತನೆ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಮಹಿಳಾ ಸ್ವಸಹಾಯ ಸಂಘಗಳಿಗೆ ನಾವು ಸಹಾಯ ಮಾಡುತ್ತೇವೆಂದು ಹೇಳಿದ್ದೀರಿ. ನಾವು ಮೊದಲಿನಿಂದಲೂ ಕೂಡಾ ಹೇಳುತ್ತಿದ್ದೇವೆ. ಯಾರೂ ಕೂಡಾ ಸಹಾಯ ಮಾಡಿರಲಿಲ್ಲ. 5,000 ರೂಪಾಯಿಗಳ ಸುತ್ತು ನಿಧಿ ಕೊಟ್ಟಿದ್ದನ್ನು ಬಿಟ್ಟರೆ ಏನೇನೂ ಕೂಡಾ ಆ ಸಂಘಗಳಿಗೆ ಕೊಡಲಿಲ್ಲ. ಆದರೆ, ಮಹಿಳಾ ಸ್ವಸಹಾಯ ಸಂಘಗಳಿಗೆ ನಾವು ಸಹಾಯವನ್ನು ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಸುತ್ತು ನಿಧಿಯನ್ನು ಘೋಷಿಸಬೇಕು. ಅಂಗನವಾಡಿ ಕಟ್ಟಡಗಳು ಮತ್ತು ಯಾವುದೇ ಗ್ರಾಮಕ್ಕೆ ಹೋದರೂ ಕೂಡಾ ಸ್ತ್ರೀ ಶಕ್ತಿ ಭವನವನ್ನು ಕೊಡಿ, ನಮ್ಮ ಊರಿಗೆ ಸಂಘದ ಮನೆ ಕಟ್ಟಿಸಿಕೊಡಿ ಎಂದು ಬೇಡಿಕೆಯನ್ನು ಪ್ರತಿ ಊರಿನಲ್ಲೂ ಮಹಿಳೆಯರು ಮಹಿಳೆಯರು ಕೇಳುತ್ತಾರೆ. ಈ ವಿಚಾರ ತಮಗೂ ಸಹ ಗೊತ್ತಿದೆ. ಅದಕ್ಕಾಗಿ ದಯಮಾಡಿ ಸರ್ಕಾರ ಆ ಕಡೆ ಕನಿಷ್ಠ ಜನಸಂಖ್ಯೆಗೆ ಫಿಕ್ಸ್ ಮಾಡಿ, 500 ಜನಸಂಖ್ಯೆ ಮೇಲೆ ಅಥವಾ 1000 ಜನಸಂಖ್ಯೆ ಮಿತಿಗೊಳಿಸಿ ಕನಿಷ್ಠ ಸ್ತ್ರೀ ಶಕ್ತಿ

ಸಂಘದ ಮನೆಗಳನ್ನು ಕೊಡುವಂಥದ್ದನ್ನು ಮಾಡಬೇಕು. ಸ್ತ್ರೀ ಶಕ್ತಿ ಸಂಘಗಳಿಗೆ ಸಾಲ ಕೊಡುವಾಗ ಬಡ್ಡಿ ರಹಿತ ಸಾಲವನ್ನು ಕೊಡುವಂಥ ಕೆಲಸವನ್ನು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ.

ಇವತ್ತು ಅರಣ್ಯ ಒತ್ತುವರಿ ಬಗ್ಗೆ ಚರ್ಚೆ ನಡೆಯುತ್ತಿದೆ. ಅದೇ ರೀತಿ ಮಲೆನಾಡಿನ 7–8 ಜಿಲ್ಲೆಗಳಲ್ಲಿ ತಮಗೂ ಗೊತ್ತಿದೆ, ಕಾರವಾರ ಆ ಕಡೆಗಳಲ್ಲೆಲ್ಲಾ ಇವತ್ತು ಜನರಿಗೆ ತಮ್ಮ ಗ್ರಾಮದಲ್ಲಿರುವಂಥ ಗ್ರಾಮ ಠಾಣಾ ಎಲ್ಲಿದೆ ಎಂದು ಗೊತ್ತಿಲ್ಲ. ಅನೇಕ ಮನೆಗಳನ್ನು ಮಂಜೂರು ಮಾಡತ್ತೇವೆ. ಆದರೆ ನಿವೇಶನ ಇಲ್ಲ, ನಿವೇಶನಗಳಿಗೆ ಹಕ್ಕುಪತ್ರ ಇಲ್ಲ, ಹಕ್ಕುಪತ್ರ ಕೊಡದಿದ್ದರೆ ಮನೆ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯ ವಾಸ್ತವಿಕತೆ ಹಳ್ಳಿಗಳಲ್ಲಿದೆ. ಆ ದೃಷ್ಟಿಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರೇ, ಕಡ್ಡಾಯವಾಗಿ ಹಕ್ಕು ಪತ್ರ ಕೊಡಬೇಕು, ಅರಣ್ಯ ಪ್ರದೇಶವಿರಲಿ, ಗೋಮಾಳವಿರಲಿ, ಕಂದಾಯ ಇಲಾಖೆ ಯಾವುದೇ ಜಾಗವಾಗಿರಲಿ ವಿಶೇಷವಾದ ಕಾನೂನನ್ನು ತಂದು ನಾವು ಮಾಡಬೇಕಾಗುತ್ತದೆ. ಇದು ವಿಧಾನಸಭೆ, ಇದು ವಿಧಾನಸಭೆ, ಅಲ್ಲಿ ಲೋಕಸಭೆ, ಅಲ್ಲಿ ಲೋಕಸಭೆ, ಮನಸ್ಸು ಮಾಡಿದರೆ ನಮಗಿಂತಲೂ ಮೀರಿದ ಕಾನೂನನ್ನು ಯಾರೂ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳು ಅರಣ್ಯ ಇಲಾಖೆಗೆ ಸೇರಿರುವುದರಿಂದ ನಾವು ಯಾರೂ ಕೂಡಾ ಮುಟ್ಟುವುದಕ್ಕಾ-ಗುವುದಿಲ್ಲವೆಂದು ಮಾತನಾಡುತ್ತಾರೆ. ಏಕೆ ಆಗುವುದಿಲ್ಲ? ಬಡವರಿಗೆ ವಾಸ ಮಾಡುವುದಕ್ಕೆ 30x40 ವಿಸ್ತೀರ್ಣದ ಜಾಗ ಕೊಡುವುದಕ್ಕೆ ಆಗುವುದಿಲ್ಲವೆಂದು ಇದು ಯಾವ ಕಾನೂನು? ಬಡವರು ಹೇಗೆ ವಾಸ ಮಾಡಬೇಕು? ಇವತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಬಡವರನ್ನೆಲ್ಲಾ ಎತ್ತುವಳಿ ಮಾಡಿಸುತ್ತಿದ್ದಾರೆ. ಅದು ಅಷ್ಟು ಸುಲಭದ ಮಾತಲ್ಲ. ಆದ್ದರಿಂದ, ಕೇವಲ ಭಾಷಣದ ಮೂಲಕವಲ್ಲ, ಈ ನಿಟ್ಟಿನಲ್ಲಿ ಸರ್ಕಾರ ತಮ್ಮ ಬದ್ಧತೆಯನ್ನು ಪ್ರದರ್ಶನ ಮಾಡಬೇಕು.

ನಾನು ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಲಾಡ್‌ರವರೇ, ಎಲ್ಲಿ ಬಿಪಿಎಲ್ ಕಾರ್ಡ್ ಮೇಲೆ ಗ್ಯಾಸ್ ಎಂ<ದು ಬರೆದಿದ್ದಾರೆ, ಹಳ್ಳಿಗಳಲ್ಲಿ ಅವರಿಗೆ ನಾವು ಸೀಮೆಎಣ್ಣೆ ಕೊಡುತ್ತಿಲ್ಲ. ಇವತ್ತು ವಿದ್ಯುತ್ ಸಹ ಇರುವುದಿಲ್ಲ. ಹೀಗಿರುವಾಗ ಸೀಮೆ ಎಣ್ಣೆ ಕೊಡದಿದ್ದರೆ ಅವರು ಹೇಗೆ ಜೀವನ ಮಾಡಬೇಕು? ಕನಿಷ್ಠ ಎರಡೆರಡು ಲೀಟರ್ ಸೀಮೆಎಣ್ಣೆಯನ್ನು ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಬೇಕು. ತಾವು ಸಬ್ಸಿಡಿಯಲ್ಲಿ ಅನೇಕ ತರಹದ

ಸಾಲವನ್ನು announce ಮಾಡಿದ್ದೀರಿ. ಗ್ರಾಮೀಣ ಪ್ರದೇಶದವರಿಗೆ ಸಬ್ಸಿಡಿ ಮೂಲಕ ಸೀಮೆಎಣ್ಣೆಯನ್ನು ಕೊಡುತ್ತೇವೆಂದು ಸರ್ಕಾರ ಹೇಳಿ ಘೋಷಣೆ ಮಾಡಬೇಕು. ಆ ಪದ್ಧತಿಯನ್ನು ತನ್ನಿ. ಜೊತೆಗೆ ಕಾರ್ಡ್‌ಗಳಿಗೆ ಯಾವಾಗ ನೀವು ಅಂತಿಮ ಹಾಡುತ್ತೀರಿ? ಇನ್ನು ಕೂಡಾ ಅವ್ಯವಹಾರಗಳ ಬಗ್ಗೆ ಗೊತ್ತಾಗುತ್ತಿಲ್ಲ. ಆ ನಿಟ್ಟಿನಲ್ಲಿ ಕೂಡಾ ಹೆಚ್ಚು ಕ್ರಮವನ್ನು ವಹಿಸಬೇಕೆನ್ನುವಂಥ ಮಾತನ್ನು ಹೇಳುತ್ತೇನೆ.

ವಸತಿ ಯೋಜನೆಯಲ್ಲಿ ತಾವು ಮನೆಗಳನ್ನು ಹಂಚಿಕೆ ಮಾಡುತ್ತಿದ್ದೀರಿ. ನಮ್ಮ ಸರ್ಕಾರ ಹಿಂದೆ ಅಸ್ತಿತ್ವದಲ್ಲಿದ್ದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಒಂದು ಒಳ್ಳೆ ಸಲಹೆಯನ್ನು ಅವರು ಮುಂದಿಟ್ಟಿದ್ದರು. ಆದರೆ, ಅನೇಕ ಕಾರಣಕ್ಕಾಗಿ ನಾವು ಶಾಸಕರುಗಳೆಲ್ಲಾ ಅದನ್ನು ವಿರೋಧ ಮಾಡಿದ್ದೆವು. ಲಾಟರಿ ಮೂಲಕ ಹಂಚಿಕೆ ಮಾಡುವ ಕೆಲಸ ಮಾಡಬೇಕು. ಈಗ ನಮ್ಮ ಬಳಿ ಪ್ರತಿ ತಾಲ್ಲೂಕಿನ demand list ಇದೆ. ಯಾರ್ಯಾರು ಗುಡಿಸಲು ವಾಸಿಗಳಿದ್ದಾರೆ? ಎಷ್ಟು ಜನ ಇದ್ದಾರೆ? ಯಾವ ಯಾವ ಊರಿನಲ್ಲಿ ಏನು ಎಂದು ನಮ್ಮ ಹತ್ತಿರ ಪಟ್ಟಿ ಇದೆ. ನಾವು ಅದನ್ನು ಮಾಡದೇ ಗ್ರಾಮಸಭೆಗಳ ನೆಪ ಹೇಳಿಕೊಂಡು, ಅಲ್ಲಿಯ ಪದಾಧಿಕಾಗಳು, ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರುಗಳು ಅವರವರೇ ಹಂಚಿಕೆ ಮಾಡಿಕೊಳ್ಳುವಂಥ ವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಅದಕ್ಕಾಗಿ ಸರ್ಕಾರದಲ್ಲಿ ನನ್ನ ಒತ್ತಾಯ– ವೇನೆಂದರೆ, ಇವತ್ತು demand list ಇಟ್ಟುಕೊಂಡು ಗ್ರಾಮ ಸಭೆಗಳಿಗೆ ಹೋಗಿ ಎಲ್ಲರ ಎದುರಿಗೆ ಲಾಟರಿ ಮುಖಾಂತರ ಹಂಚಿಕೆ ಮಾಡುವ ಕೆಲಸ ಮಾಡಬೇಕು. ಈ ಒಂದು ಪದ್ಧತಿ ತಂದರೆ, ಎಲ್ಲರೂ ಕೂಡ ಅನ್ಯಾಯಕ್ಕೆ ಒಳಗಾಗುವುದು ತಪ್ಪುತ್ತದೆ ಎನ್ನುವುದು ನನ್ನ ವೈಯುಕ್ತಿಕ ಅನಿಸಿಕೆ. ಸರ್ಕಾರ ಅದನ್ನು ಪರಿಗಣಿಸಬೇಕೆನ್ನುವಂಥ ಮಾತನ್ನು ಹೇಳುತ್ತಿದ್ದೇನೆ.

ಇನ್ನು ನಿರ್ಮಲ ಗ್ರಾಮ ಯೋಜನೆಯಡಿ ಸುಮಾರು 64 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರ ಸೇರಿದಂತೆ 9½ ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ. 500 ರೂಪಾಯಿ ಒಂದು ಫಲಾನುಭವಿಯ ಭಾಗವಾಗಿರುತ್ತದೆಂದು ಹೇಳಿದ್ದೀರಿ.

ಆ ನಿಟ್ಟಿನಲ್ಲಿ ಕಡ್ಡಾಯ ಶೌಚಾಲಯವನ್ನು ನಿರ್ಮಾಣ ಮಾಡುವ ಕೆಲಸವನ್ನು ಮಾಡಬೇಕು. ಕೇವಲ ಚುನಾವಣೆಗೆ ನಿಲ್ಲತಕ್ಕಂಥ ಪದಾಧಿಕಾರಿಗಳಿಗೆ

ಮಾತ್ರ ಆಗಬಾರದು. ಎಲ್ಲರಿಗೂ ಕೂಡಾ ಕಡ್ಡಾಯವಾಗಿ ಶೌಚಾಲಯವನ್ನು ಕಟ್ಟಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ.

ಇವತ್ತು ಸರ್ಕಾರ ಎತ್ತಿನಹೊಳೆ ಯೋಜನೆಯನ್ನು ಜಾರಿಗೆ ತರುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಅದು ಎಷ್ಟರಮಟ್ಟಿಗೆ ಸಾಧು, ಅದು ಜಾರಿಯಾಗುತ್ತದೆನ್ನುವ ಬಗ್ಗೆ ನಮ್ಮಲ್ಲಿ ಯಾರಿಗೂ ಕೂಡಾ ಪರಿಕಲ್ಪನೆ ಇಲ್ಲ. ನಾವು ಘೋಷಣೆ ಮಾಡಿದ ತಕ್ಷಣ, ಜನ ತುಂಬಾ ಮುಗ್ಧರಿದ್ದಾರೆ. ನಮ್ಮ ಊರಿಗೆ ನೀರು ಬರುತ್ತದೆ ಎಂದು ನಾವು ಹೇಳಿದ್ದನ್ನು ನಂಬುತ್ತಾರೆ. ಪ್ರಾರಂಭದಲ್ಲಿ 4,000 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಹೊರಟಂಥ ಈ ಯೋಜನೆ ಮನ್ನೆ ತಾವು 10,000 ಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದೀರಿ. ನನಗನ್ನಿಸುತ್ತಿದೆ. ಇದೇ ವೇಗದಲ್ಲಿ ಹೋದರೆ 25,000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನೀರು ಎಷ್ಟು ಇದೆ ಎಂದು ಬೇಕಲ್ಲ? ಇವತ್ತು ನಮ್ಮ ಇಂಜಿನಿಯರ್‌ಗಳು ಕಾಯುತ್ತಿರುತ್ತಾರೆ. ನಾವು ಈ ವರ್ಷ ಕೆಲಸ ಹೇಳಿದರೆ ಮಾಡುವುದಿಲ್ಲ. ಏಕೆಂದರೆ ಹೊಸ ಎಸ್.ಆರ್.ದರ ಬರುತ್ತದೆಯಾದ್ದರಿಂದ ಏಪ್ರಿಲ್ ಬರಲಿ, ಏಪ್ರಿಲ್ ಕಳೆಯಲಿ ಎಂದು ಹೇಳುತ್ತಾರೆ. ಹೊಸ ಎಸ್.ಆರ್. ರೇಟ್ ಹುಟ್ಟುವುದಕ್ಕಾಗಿ ಅದೇ ತರಹ ಮುಂದೆ ಹೋಗಿ ಹೋಗಿ ಇನ್ನು ಒಂದು ವರ್ಷ ಕಳೆಯಲಿ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಇವತ್ತು ನಮ್ಮ ಭಾಗದಲ್ಲಿ ಕಾವೇರಿ ನೀರನ್ನೆಲ್ಲಾ ಹಂಚಿಕೆ ಮಾಡುತ್ತಿದ್ದೇವೆ. ಇದಕ್ಕೆ ಮೂಲ ಕಾರಣ ಏನು? ಇವತ್ತು ನಮ್ಮ ಜಲಾನಯನ ಪ್ರದೇಶ ಸಕಲೇಶಪುರ, ಮೂಡಿಗೆರೆ, ಚಿಕ್ಕಮಗಳೂರು ಭಾಗಗಳಲ್ಲಿ ಮತ್ತು ಭಾಗಮಂಡಲದಲ್ಲಿ ಮಳೆಯಾದರೆ ಮಾತ್ರ ಈ ಹೊಡೆದಾಟ ಇಲ್ಲಿ ಬರುವಂಥ ಪ್ರಶ್ನೆ. ನೀರೇ ಬರದಿದ್ದರೆ, ಇವತ್ತು ನಮ್ಮ ಭಾಗದಲ್ಲಿ 250 ಟಿಎಂಸಿ ಮಳೆ ನೀರು ಬೀಳುತ್ತದೆ. 250 ಟಿಎಂಸಿ. . . . . .

ಅಧ್ಯಕ್ಷರು : ನೀರನ್ನು ಹರಿದು ಹೋಗಲು ಬಿಡಬೇಡಿ, ಹಿಡಿದಿಟ್ಟುಕೊಳ್ಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : 150 ಟಿಎಂಸಿ ಮಂಗಳೂರು ಕಡೆ ಸಮುದ್ರಕ್ಕೆ ಹೋಗುತ್ತಿದೆ. ಆ ನೀರನ್ನು ಹಿಡಿದು ನಾವು ವಾಪಸ್ಸು ತರುತ್ತೇವೆಂದು ತಾವು ಹೇಳುತ್ತಿದ್ದೀರಿ. ಅದಕ್ಕೆ 10,000 ಕೋಟಿ ರೂಪಾಯಿ ಎಂದು

ಹೇಳುತ್ತಿದ್ದೀರಿ. 10,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಯಾವಾಗ? ಅದಕ್ಕೆ ಪರಿಸರ ಇಲಾಖೆ ಒಪ್ಪಿಗೆ ಕೊಡಬೇಕು. ಅಲ್ಲಿಂದ ಇಲ್ಲಿಯ ಕೋಲಾರಕ್ಕೆ ಪೈಪ್ ತರಬೇಕು. ಹಾಗೆ imagine ಮಾಡಿಕೊಳ್ಳೋಣ. ಭಾಷಣ ಬಹಳ ಚೆನ್ನಾಗಿರುತ್ತದೆ. ಚಿತ್ರ ತೋರಿಸುವುದಕ್ಕೆ, ಮಾತನಾಡುವುದಕ್ಕೆ ಬಹಳ ಚೆನ್ನಾಗಿರುತ್ತದೆ. ಅದು ಜಾರಿಯಾಗಬೇಕಲ್ಲ ಅಷ್ಟು ಸುಲಭವಾಗಿ? ಒಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಇಷ್ಟೆಲ್ಲಾ ನಾವು ನೀರನ್ನು ಕೊಡುತ್ತೇವೆ. ಸಕಲೇಶಪುರ, ಮೂಡಿಗೆರೆ, ಚಿಕ್ಕಮಗಳೂರು ಆ ಜಲಾನಯನ ಅಚ್ಚುಕಟ್ಟು ಪ್ರದೇಶದವರು ನಾವು ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ನಮ್ಮ ಬಿ.ಜೆ.ಪಿ ನಾಯಕರು ಇಲ್ಲಿಯೇ ಇದ್ದಾರೆ. ಮಳೆ ಹಾನಿಯಾದಾಗ ಬಿಕ್ಕಮಗಳೂರು ಜಿಲ್ಲೆಗೆ ರೂ. 50 ಕೋಟಿ, ಕೊಡಗು ಜಿಲ್ಲೆಗೆ 25 ಕೋಟಿ ರೂ. ರಸ್ತೆಗಳಿಗೆ, ಮತ್ತೊಂದಕ್ಕೆ ಕೊಡಲಾಯಿತು. ಇವರೆಲ್ಲರೂ ಸಕಲೇಶಪುರ ಹಾಗೂ ಬೇರೆ ಕಡೆಗಳಿಗೆ ಬಂದಾಗ ನಾನು ನಮ್ಮ ನಾಯಕರುಗಳಿಂದೆಲ್ಲಾ ಪತ್ರಗಳನ್ನು ಕೊಡಿಸಿ ಬಡಿದು ಕೊಂಡೆ ಆದರೆ, ಯಾರೂ ಕೂಡಾ ಕೊಡಲಿಲ್ಲ. ಸಕಲೇಶಪುರ ತಾಲ್ಲೂಕಿನ ರಸ್ತೆಗಳು ಹೇಗಿವೆ ಎಂಬುದನ್ನು ತಾವು ನೋಡಬೇಕು. ತಾವು ಎಲ್ಲರಿಗೂ ಏಕರೂಪವಾಗು ಹಂಚುತ್ತೀರಿ. 30 ಕಿ.ಮೀ. ಹಿಂದಿನ ಸರ್ಕಾಎವಿದ್ದಾಗ 50 ಕಿ.ಮೀ. ಕೊಟ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. 50 ಕಿ.ಮೀ. ಪ್ರತಿ ಕ್ಷೇತ್ರಕ್ಕೆ. ಯಾವಾಗಲೂ ಅನುದಾನ ಬಿಡುಗಡೆ ಮಾಡುವಾಗ ಜನಸಂಖ್ಯೆಯನ್ನು ನೋಡಬಾರದು. ಭೌಗೋಳಿಕ ವಿಸ್ತೀರ್ಣ ಎಷ್ಟಿದೆ, ಸನ್ನಿವೇಶ ಏನಿದೆ, ಸಮಸ್ಯೆ ಏನಿದೆ ಅದನ್ನು ನೋಡಬೇಕು. ನಾವು ಕೆಟ್ಟಿದ್ದೇ ಇಲ್ಲಿ. ಮೊನ್ನೆ ಕ್ಷೇತ್ರ ವಿಂಗಡಣೆ ಮಾಡುವಾಗ ಜನಸಂಖ್ಯೆ ಆಧಾರವನ್ನು ಇಟ್ಟುಕೊಂಡಿದ್ದೆ ತಪ್ಪಾಗಿ ಹೋಯಿತು. ನನ್ನ ಕ್ಷೇತ್ರದಲ್ಲಿ ಸುಮಾರು 700 ಚಿಲ್ಲರೆ ಕಿ.ಮೀ. ಪಿ.ಡಬ್ಲ್ಯೂಡಿ ರಸ್ತೆಗಳು, ಮೂರು ಸಾವಿರ ಚಿಲ್ಲರೆ ಕಿ.ಮೀ ಜಿಲ್ಲಾ ಪಂಚಾಯಿತಿ ರಸ್ತೆಗಳಿವೆ. ನನಗೆ ಮೂರು ತಾಲ್ಲೂಕುಗಳು ಬರುತ್ತವೆ. ಮೂರು ಸಾವಿರ ಕಿ.ಮೀ. ಇರುವವರಿಗೂ 30 ಕಿ.ಮೀ. ನಮ್ಮ ಹೆಚ್.ಎಸ್. ಪ್ರಕಾಶ್ ರವರಿಗೆ ಕೇವಲ 35 ಕಿ.ಮೀ. ಜಿಲ್ಲಾ ಪಂಚಾಯಿತಿ ರಸ್ತೆಗಳು ಬರುತ್ತವೆ. ಅವರಿಗೂ 30 ಕಿ.ಮೀ. ಅವರು ಖುಷಿಯಾಗಿದ್ದಾರೆ. ಹೇ ಮುಗಿಯಿತಣ್ಣ, ನನ್ನ ಸಮಸ್ಯೆ ಬೇರೆಯಿಲ್ಲ. ನನ್ನ ಕೆಲಸವಾಗಿ ಹೋಯಿತು ಎಂದು. ನೋಡಿ, ಮಳೆ ಸುರಿಸುವವರು ನಾವು. ಅಲ್ಲಿಂದ ನೀರು ಇಲ್ಲಿಗೆ

ಬರುತ್ತದೆ, ನೀವು ಖುಷಿಯಾಗಿರುತ್ತೀರಿ, ನಷ್ಟ ನಮಗೆ. ಅದಕ್ಕಾಗಿ ಸರ್ಕಾರವನ್ನು ನಾನು ವಿನಂತಿ ಮಾಡುತ್ತೇನೆ. ಇದೊಂದು ನೀತಿ ಎಂದು ಪರಿಗಣಿಸಿ, ಪ್ರತಿ ವರ್ಷ ಸಕಲೇಶಪುರ ಭಾಗಕ್ಕೆ 50 ಕೋಟಿ ರೂ.ಗಳನ್ನು ರಸ್ತೆಗಳ ದುರಸ್ತಿಗೆ ಹಾಗೂ ಹೊಸ ರಸ್ತೆಗಳ ನಿರ್ಮಾಣಕ್ಕೆ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಿಂದಿನ ಸರ್ಕಾರವೂ ಕೂಡಾ ಸಾಕಷ್ಟು ತಾರತಮ್ಯ ಮಾಡಿದೆ. ಅದನ್ನು ಹೇಳುವುದಕ್ಕೆ ಹೋದರೆ, ನಮ್ಮ ಮಾನ್ಯ ನಾಯಕರು ಮುಂದಿನ ದಿನಗಳಲ್ಲಿ ಅವುಗಳನ್ನೆಲ್ಲಾ ಹೇಳುತ್ತಾರೆ. ಈಗ ಆ ವಿಷಯ ಬೇಡ. ವಿದ್ಯುತ್ ಸಮಸ್ಯೆ ಬಹಳಷ್ಟು ಹದಗೆಟ್ಟಿದೆ. Transformer ಗಳು ಇರಬಹುದು ಕಂಬಗಳಿರಬಹುದು, ವೈರ್‌ಗಳಿರಬಹುದು. ಬಹುಶಃ ಅಲ್ಲಿಯೇ ಇರುವಂತಹ ಜನ ಪ್ರತಿನಿಧಿಗಳಿಗೆ ಇವು ಅರ್ಥವಾಗುತ್ತದೆಂದು ಭಾವಿಸಿದ್ದೇನೆ. ಪ್ರತಿ ದಿನವೂ ಕೂಡಾ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿಸುತ್ತೇವೆ, ಅದನ್ನು ತೆಗೆದುಕೊಂಡು ಹೋಗಿ fix ಮಾಡುವಷ್ಟರಲ್ಲಿ ಕೆಟ್ಟು ಹೋಗುತ್ತವೆ. ಅದುಹೋಯಿತು, ಇದುಹೋಯಿತು ಎಂದು ಶಾಸಕರು ಎಷ್ಟು ಗುರಿಯಾಗಿದ್ದಾರೆಂಬುದು ತಮಗೇ ಗೊತ್ತು. ಯಾರೂ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯವರಿಗೆ ಫೋನ್ ಮಾಡುವುದಿಲ್ಲ. ಎಲ್ಲಾ ವಿಷಯಕ್ಕೂ ಶಾಸಕರಿಗೇ ಫೋನ್ ಮಾಡುವಂತದ್ದು. ಆದುದರಿಂದ ಇಂತಹ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸುವುದು ಮತ್ತು ನಮ್ಮ ಹೆತ್ತೂರಿನಲ್ಲಿ ಹಿಂದೆ ನಮ್ಮ ಸರ್ಕಾರವಿದ್ದಾಗ ಅಲ್ಲಿಗೆ ಬಂದು ಎಂ.ಯು.ಎಸ್.ಎಸ್. ಮಂಜೂರಾಗಿತ್ತು. ಕಳೆದ 5 ವರ್ಷಗಳಿಂದ ನಾವು ಎಷ್ಟೇ ಪ್ರಯತ್ನ ಪಟ್ಟರೂ ಮತ್ತೆ ಮಂಜೂರಾತಿ ಪಡೆಯಲು ಸಾಧ್ಯವಾಗಲಿಲ್ಲ. ಸಾಂಕೇತಿಕವಾಗಿ ಬಜೆಟ್‌ನಲ್ಲಿ ಒಂದು ಲಕ್ಷ ರೂ. ಇಡುತ್ತಾರೆ ಮಾನ್ಯ ಅಧ್ಯಕ್ಷರೆ. 6 ಕೋಟಿ 78 ಲಕ್ಷ estimate ಗೆ ಒಂದು ಲಕ್ಷ ರೂಪಾಯಿ ಸುಮ್ಮನೆ ಏನೋ ಒಂದು ಖುಷಿ ಪಡಿಸುವುದಕ್ಕೆ. ನಾವು ಸೈಟ್ ಕೊಟ್ಟಿದ್ದೇವೆ. ಎಲ್ಲಾ ಕೊಟ್ಟಿದ್ದೇವೆ. ಅದನ್ನು ದಯಮಾಡಿ ಈ ಬಾರಿಯಾದರೂ ಸೇರಿಸಿಕೊಡಿ ಎಂದು ಹೇಳುತ್ತೇನೆ. ಎಲ್ಲದಕ್ಕಿಂತ ಹೆಚ್ಚಾಗಿ ಮರಳು ನೀತಿ. ನಮ್ಮಲ್ಲಿ ಮರುಳು ಸಮಸ್ಯೆ, ಮದ್ಯದ ಸಮಸ್ಯೆ, ಕಾಡಾನೆ ಸಮಸ್ಯೆ ಇವೆ ಜಾಸ್ತಿ. ಮರುಳು ನೀತಿ. ಮಾನ್ಯ ಲೋಕೋಪಯೋಗಿ ಸಚಿವರು ಹೊರಗೆ ಹೋದರು. ಇಂದು PWD ಇಲಾಖೆ, ಪೊಲೀಸ್ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ರೆವಿನ್ಯೂ

ಇಲಾಖೆ, ಈ ನಾಲ್ಕು ಇಲಾಖೆಗಳು ಒಟ್ಟಿಗೆ ಜಂಟಿ ಜಾವಾಬ್ದಾರಿ ತೆಗೆದು ಕೊಂಡರೆ ಸಮಸ್ಯೆ ಬಗೆಹರಿಸಬಹುದು. ಆದರೆ, ಒಂದು ಇಲಾಖೆಯ ಮೇಲೆ ಮತ್ತೊಂದು ಇಲಾಖೆಯವರು ಜವಾಬ್ದಾರಿಯನ್ನು ಹೊರಿಸಿ, ಜವಾಬ್ದಾರಿಯಿಂದ ನುಣಿಚಿಕೊಳ್ಳುವ ಕೆಲಸ ಮಾಡಿಕೊಂಡು ಯಾರೊಬ್ಬರು ಕೆಲಸ ಮಾಡುತ್ತಿಲ್ಲ. PWD ನವರಿಗೆ ವಹಿಸಿದ್ದೇವೆಂದು ಹೇಳುತ್ತಾರೆ. ಏನು ಮಾಡುತ್ತಾರೆ PWD ನಲ್ಲಿ? ಒಂದು sub-Division ನಲ್ಲಿ 4–5 ಜನ ಇಂಜಿನಿಯರ್‌ಗಳಿರಬೇಕು. ನಮ್ಮಲ್ಲಿ ಇಬ್ಬಿಬ್ಬರಿದ್ದಾರೆ. ಮಾನ್ಯ ಸಚಿವರು ಈಗ ಬಂದರು, ಜಿಲ್ಲಾ ಪಂಚಾಯಿತಿಯಲ್ಲಿರುವ 7 post ಗಳಿಗೆ ನನ್ನ ತಾಲ್ಲೂಕಿನಲ್ಲಿ ಕೇವಲ ಮೂರು ಜನರಿದ್ದಾರೆ. ಆಲೂರಿನಲ್ಲಿ ಸಿಬ್ಬಂದಿ ಇಲ್ಲ. ಎಲ್ಲೂ ಕೂಡಾ ಸಿಬ್ಬಂದಿ ಇಲ್ಲ. ಗ್ರಾಮ ಪಂಚಾಯಿತಿ ಕೆಲಸ ಮಾಡಬೇಕು. ತಾಲ್ಲೂಕು ಪಂಚಾಯಿತಿ ಮಾಡಬೇಕು. ಲೋಕಸಭಾ ಸದಸ್ಯರದು ಮಾಡಬೇಕು, ಶಾಸಕರದು ಮಾಡಬೇಕು.

ಅಧ್ಯಕ್ಷರು : Recruitment ಮಾಡಿಲ್ಲ; recruitment ಏಕೆ ಮಾಡಿಲ್ಲ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಇನ್ನೂ ಅನೇಕ ಜವಾಬ್ದಾರಿ ಅವರ ಮೇಲಿದೆ. ಮಾನ್ಯ ಸಚಿವರು ಪಾಟೀಲ್ ಸಾಹೇಬರು ಬಂದರು ಇಲ್ಲಿಗೆ. ಮೊನ್ನೆ ಮಾನ್ಯ ಸಭಾಧ್ಯಕ್ಷರು ಗ್ರಾಮ ಪಂಚಾಯಿತಿಗೆ ಒಬ್ಬರನ್ನು ಕೊಡಿ ಎಂದು ಹೇಳಿದರು. ದಯಮಾಡಿ ಗ್ರಾಮ ಪಂಚಾಯಿತಿಗೆ ಒಬ್ಬರು ಬೇಡ, ಎರಡು–ಮೂರು ಗ್ರಾಮ ಪಂಚಾಯಿತಿಗಾದರೂ ಒಬ್ಬೊಬ್ಬರನ್ನು ಕೊಡಿ. ಇವತ್ತು ಏನೂ ಕೆಲಸವಾಗುತ್ತಿಲ್ಲ. ಎನ್.ಆರ್.ಇ.ಜಿ. ಯಿಂದ ಸದಸ್ಯ approve ಆಗುವುದನ್ನು ಕಾಯುತ್ತಿರುತ್ತಾನೆ. ಇಲ್ಲಿ estimate ಇಲ್ಲ, approval ಇಲ್ಲ, ಏನೂ ಇಲ್ಲ ಹೋಗಿ ಮಾಡಿ ಆಯಿತು. ಮುಂದಿನ ವರ್ಷಕ್ಕೆ action plan ಬಂದಾಗ ಪುನಃ ಜಗಳ. ಅದಕ್ಕಾಗಿ ದಯಮಾಡಿ ವಿಶೇಷವಾಗಿ ಪಂಚಾಯತ್ ರಾಜ್ ಇಲಾಖೆಗೆ ಆದಷ್ಟು ಬೇಗ ಅಥವಾ ಎನ್.ಆರ್.ಇ.ಜಿ. ಗೆ ಒಬ್ಬೊಬ್ಬ ಇಂಜಿನಿಯರ್ ಅನ್ನು ಕೊಡಿ. ನಮಗೇನೂ ಬೇಜಾರಿಲ್ಲ. ನಿಮಗೆ ಗೊತ್ತಿದೆ, ಇಷ್ಟೆಲ್ಲಾ ಮಾಡಬೇಕಲ್ಲ. ಈ ರೀತಿ ಸಿಬ್ಬಂದಿಯನ್ನು ಕೊಡದಿದ್ದರೆ ನೀವು ಎಷ್ಟೇ ಚೆನ್ನಾಗಿರುವ ಕಾರ್ಯಕ್ರಮವನ್ನು ಸುಮ್ಮನೆ ಹೇಳಿ ಏನೂ ಪ್ರಯೋಜನವಾ–

ಗುವುದಿಲ್ಲ. ಯಾವುದೇ ಕಾರ್ಯಕ್ರಮ ಜಾರಿಗೆ ಬಂದಾಗ ಮಾತ್ರ ಜನಸಾಮಾನ್ಯರು ಖುಷಿಯಾಗಿ ಸರ್ಕಾರದ ಬಗ್ಗೆ ಒಂದು ಸದಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದೇ ಆಗದಿದ್ದರೆ ಹೇಗಾಗುತ್ತದೆ? ಆದುದರಿಂದ ದಯಾಮಾಡಿ ಆ ಕೆಲಸವನ್ನು ಮಾಡಬೇಕು. ಮರುಳು ನೀತಿಯನ್ನು ಪುನರ್ ವಿಮರ್ಶೆ ಮಾಡಬೇಕು. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಮರಳಿಗಾಗಿಯೇ ಇಂದು ನೂರಾರು ಜನರ ಸಾಯುತ್ತಿದ್ದಾರೆ. ಇಂದು ಬೆಳಿಗ್ಗೆ ನಮ್ಮ ಸದಸ್ಯರು ಚೆನ್ನಾಗಿ ಹೇಳಿದರು. ಎರಡು-ಮೂರು ಸಾವಿರ ತೆಗೆದುಕೊಳ್ಳುವುದನ್ನು 25 ಸಾವಿರಕ್ಕೆ ಇಂದು ಇಲ್ಲಿ ಮಾರುತ್ತಿದ್ದಾರೆ. ಇದೇ ಒಂದು ದಂಧೆಯಾಗಿದೆ. ಇದರಲ್ಲಿ ರೆವಿನ್ಯೂ ಸೇರಿದಂತೆ ಎಲ್ಲಾ ಇಲಾಖೆಗಳು ಶಾಮೀಲಾಗಿವೆ. ಒಬ್ಬರು ಇನ್ನೊಬ್ಬರ ಮೇಲೆ ಹಾಕಿ ಅಂತಿಮವಾಗಿ ನಾವು ಶಾಸಕರ ತಲೆಗೆ ತಂದು ಕಟ್ಟಿದ್ದೀರಿ ನೀವು. ನಾವು ಶಾಸಕರು ಲಾರಿ ಬಿಡಿಸುವುದಕ್ಕೆ ಆಗುವುದಿಲ್ಲ ಇವತ್ತು. ಬರಿ ಲಾರಿ, tractor ಗಳಿಗೆ ಏಕೆ ಕೊಡುವುದಿಲ್ಲ ನೀವು. ಜನತಾ ಮನೆ ಕಟ್ಟುವವನು ಲಾರಿಯಲ್ಲಿ ಹಾಕಿಕೊಂಡು ತೆಗೆದುಕೊಂಡು ಹೋಗುತ್ತಾರೆ. ದೆವಸ್ಥಾನ ಕಟ್ಟುವವರು, ಜನತಾ ಮನೆ ಕಟ್ಟುವವರು, ಜನತಾ ಮನೆ ಕಟ್ಟುವವರಿಗೆ tractor ನಲ್ಲಿ ಅವಕಾಶ ಕೊಡಿ. ಟ್ರ್ಯಾಕ್ಟರ್ ಗಳಿಗೂ ಜೆ.ಪಿ.ಎಸ್. ಕೊಡಿ ನಮ್ಮ ಜಿಲ್ಲೆಯಲ್ಲಿ ಕೇವಲ ಲಾರಿಗಳಿಗೆ ಕೊಟ್ಟಿದ್ದೀರಿ. ನಮ್ಮ ಜಿಲ್ಲೆಯ ಡಿ.ಸಿ. ಯವರಿಗೆ ತಾವು ಆದೇಶ ಕೊಡಬೇಕು. ಟ್ರ್ಯಾಕ್ಟರ್‌ಗಳಿಗೂ ಕೊಡಲಿ. ನಂತರ ಗ್ರಾಮ ಪಂಚಾಯಿತಿಯವರು certify ಮಾಡಲಿ. ಈ ತರಹದ್ದು ಏನಾದರೂ rational ಆಗಿ ಮಾಡುವ ಕೆಲಸವನ್ನು ಮಾಡಬೇಕೆಂಬುದು ಹೇಳುತ್ತೇನೆ. ಇನ್ನು ಸಾರಿಗೆ ಸಚಿವರು ಇಲ್ಲಿಯೇ ಇದ್ದಾರೆ. ಮಾಡುವ ಕೆಲಸವನ್ನು ಮಾಡಬೇಕೆಂಬುದು ಹೇಳುತ್ತೇನೆ. ಇನ್ನು ಸಾರಿಗೆ ಸಚಿವರು ಇಲ್ಲಿಯೇ ಇದ್ದಾರೆ. ಆಗಲೇ ಅವರು ಎದ್ದು ಹೋಗಿದ್ದರು ಎಂದು ಹೋಗಿದ್ದರು ಎಂದು ನಾನು ಮಾತನಾಡಲಿಲ್ಲ. ಇಂದು ಮಲೆನಾಡು ಭಾಗದಲ್ಲಿ ಸಾರಿಗೆ ವ್ಯವಸ್ಥೆ ಸುಧಾರಣೆ ಮಾಡಿಸುವ ಕೆಲಸವನ್ನು ಮಾನ್ಯ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಸಾಹೇಬರು ಮಾಡಬೇಕಾಗಿದೆ. ಕೆಲವು ಸಾರಿ ನಾವು ಅಧಿಕಾರಕ್ಕೆ ಬಂದಾಗ ಏನು ಮಾಡುತ್ತೇವೆಂದರೆ, ನಾನೇನೋ ಮಂತ್ರಿಯಾದೆ. ನನ್ನ ಭಾಗಕ್ಕೆ ವಿಶೇಷವಾಗಿ ಏನೋ ಕೆಲಸವನ್ನು ಮಾಡಬೇಕೆಂಬ ಆಸೆಯಲ್ಲಿ ಹಿಂದೆ ಸಗೀರ್ ಅಹಮದ್ ರವರು ಮಂತ್ರಿಗಳಾಗಿದ್ದರು. ಸಾರಿಗೆ ಸಚಿವರಾದರು

ಅವರು ಚಿಕ್ಕಮಗಳೂರು ಸಾರಿಗೆ ವಿಭಾಗ ಇರಲಿಲ್ಲ. ಅದು ಹಾಸನಕ್ಕೆ ಸೇರಿತ್ತು. ಅವರು ನನ್ನ ಊರಿಗೆ ಮಾಡಿಕೊಳ್ಳಬೇಕೆಂಬ ಭರದಲ್ಲಿ ಚಿಕ್ಕಮಗಳೂರು ವಿಭಾಗವನ್ನು ಮಾಡಿಕೊಂಡು ಬಿಟ್ಟರು. ಬೇಲೂರು, ಸಕಲೇಶಪುರವನ್ನು ಅಲ್ಲಿಗೆ ಸೇರಿಸಿದರು, ಸಕಲೇಶಪುರವನ್ನು ಅಲ್ಲಿಗೆ ಸೇರಿಸಿದರು. ಬೇಲೂರು, ಸಕಲೇಶಪುರ ಎರಡು ತಾಲ್ಲೂಕುಗಳು ತಬ್ಬಲಿಗಳಾಗಿ ಹೋದವು. ನಾವೇನಾದರೂ ಆಡಳಿತ ಕೇಳಲು ಹೋಗಬೇಕಾದರೆ, ಚಿಕ್ಕಮಗಳೂರಿಗೇ ಹೋಗಬೇಕು. ಎಲ್ಲಾ ಜನರಿಗೆ ಹಾಸನಕ್ಕೆ ಬರುವ ಅಭ್ಯಾಸವಿರುವುದು. ನಾವು ಚಿಕ್ಕಮಗಳೂರಿಗೆ ಹೋಗಬೇಕು. ಮಾನ್ಯ ಸಚಿವರೆ, ಮಲೆನಾಡಿನ ನಮ್ಮ ಸಕಲೇಶಪುರ ತಾಲ್ಲೂಕಿನ ಡಿಪೋದಲ್ಲಿ 102 ಮಾರ್ಗಗಳಿವೆ, 102 ರಲ್ಲಿ 50–60 ಸರಿಯಾಗಿ ಓಡುತ್ತಿರಬಹುದು. ಇರುವಂತಹ ಶೇಕಡ 80 ರಷ್ಟು ಬಸ್ಸುಗಳು ಹಳೆಯವು. ಹೊಸ ಬಸ್ಸುಗಳು ಇಲ್ಲವೇ ಇಲ್ಲ. ಹಾಸನದಿಂದ ಬೆಂಗಳೂರಿಗೆ ಎರಡೆರಡು ನಿಮಿಷಕ್ಕೆ ಒಂದೊಂದು ಬಸ್ಸುಗಳಿವೆ. ಏಕೆ ಅಷ್ಟೊಂದು ಬಸ್ಸುಗಳನ್ನು ಕೊಟ್ಟಿದ್ದೀರಿ? ನೀವು ಕೊಟ್ಟಿದ್ದೀರಿ ಎಂದು ನಾನು ಹೇಳುತ್ತಿಲ್ಲ. ತಾವು ಈಗ ಬಂದಿರುವುದು ಅದು ಬೇರೆ ವಿಚಾರ. ಹಿಂದಿನವರೇ ಆಗಲಿ, ಹಾಸನದಿಂದ ಬೆಂಗಳೂರಿಗೆ ಎರಡೆರಡು ನಿಮಿಷಕ್ಕೆ ಬಸ್ಸುಗಳೇಕೆ ಬೇಕು? Deluxe ಏಕೆ ಬೇಕು? ಮಲೆನಾಡು ಜನರೂ ಕೂಡಾ ತಿರುಗಲಿ, ಅವರೂ deluxe ಬಸ್ಸುಗಳಲ್ಲಿ ಹೋಗಲಿ, ಕೊಡಿ ಅವರೂ ದುಡ್ಡನ್ನು ಕೊಡುತ್ತಾರೆ. ಮುರಕಲು ಬಸ್ಸು, ಕಾಡಾನೆ ಸಮಸ್ಯೆ, ಮಧ್ಯರಾತ್ರಿಯಲ್ಲಿ ಕೆಟ್ಟು ಹೋಗುತ್ತವೆ, conductor ಇಲ್ಲ driver ಇಲ್ಲ. Tyre ಇಲ್ಲ, tube ಇಲ್ಲ, ಮತ್ತೊಂದಿಲ್ಲ. ಹೇಳಬಾರದು ಆ ಸಮಸ್ಯೆಯನ್ನು ದಯಾಮಾಡಿ ತಾವು ಹೊಸ ಬಸ್ಸುಗಳನ್ನು ಖರೀದಿ ಮಾಡಿದ್ದೀರಿ, ಕೊಡುತ್ತೇವೆಂದು ಹೇಳಿದ್ದೀರಿ. ದಯವಿಟ್ಟು ನಮ್ಮ ಮಲೆನಾಡು ಭಾಗ, ಅದರಲ್ಲೂ ಕೂಡಾ ಸಕಲೇಶಪುರ ಡಿಪೋವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಅಲ್ಲಿ ಬರುವ ನೌಕರರು ಹೇಗೆಂದರೆ, ತಪ್ಪು ಮಾಡಿದವರನ್ನು ಕೊಪ್ಪಕ್ಕೆ ಹಾಕುತ್ತಾರೆಂದು ಈ ಹಿಂದೆ ಹೇಳುತ್ತಿದ್ದರು. ತಪ್ಪು ಮಾಡಿದವರನ್ನು ಉತ್ತರ ಕರ್ನಾಟಕಕ್ಕೆ ಹಾಕುತ್ತಾರೆಂದು ಮಾತನಾಡಿಕೊಳ್ಳುತ್ತಿದ್ದರು. ಆದರೆ ಈಗ ತಪ್ಪು ಮಾಡಿದವರನ್ನು ಮಲೆನಾಡು ಹಾಕಬೇಕೆಂಬ ಭಾವನೆ ಬಂದು ಹೋಗಿದೆಯೋ, ಏನೋಪ್ಪ. ನಮ್ಮ ಸಕಲೇಶಪುರಕ್ಕಂತೂ ಯಾರೂ ನೌಕರರು ಬರುವುದಿಲ್ಲ. ಏನೆಂದು ನನಗೆ

ಗೊತ್ತಿಲ್ಲ. ಅಲ್ಲಿ ಮಳೆ ಒಪ್ಪುತ್ತೇನೆ. ಅದರ ಜೊತೆಗೆ service mind ಇರಬೇಕಲ್ಲ? ಹಾಗಾಗಿ ದಯಮಾಡಿ ಸಾರಿಗೆ ಇಲಾಖೆಯನ್ನು ಸುಧಾರಿಸಿಕೊಡಿ. ಹೊಸ ಬಸ್ಸುಗಳನ್ನು ಹೆಚ್ಚು ಕೊಡಿ. ಎಲ್ಲಕ್ಕಿಂತ ಹೆಚ್ಚಾಗಿ ಬೇಲೂರು, ಸಕಲೇಶಪುರ ಎರಡನ್ನೂ ಹಾಸನಕ್ಕೆ ವಿಭಾಗಕ್ಕೆ ಸೇರಿಸಿಕೊಂಡು ಬಿಡಿ. ನಮ್ಮ ರುದ್ರೇಶ್ ಗೌಡ ರವರು ಏನು ಹೇಳುತ್ತಾರೋ ಗೊತ್ತಿಲ್ಲ. ಮಾತನಾಡಲು ಇನ್ನು ಅನೇಕ ವಿಚಾರಗಳಿವೆ. ತಾವು ಈಗಾಗಲೇ ಬೆಲ್ ಹೊಡೆಯುತ್ತಿದ್ದೀರಿ. ಕಂದಾಯ ಇಲಾಖೆ ಬಗ್ಗೆ ಕೊನೆಯದಾಗಿ ಮಾತನಾಡಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

ಅಧ್ಯಕ್ಷರು : 06.00 ಗಂಟೆಯಾಗಿ ಹೋಯಿತು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಹಿಂದಿನ ಸರ್ಕಾರ ತಾಲ್ಲೂಕು ಪುನರ್ ರಚನೆಯ ಬಗ್ಗೆ ಘೋಷಣೆ ಮಾಡಲಾಗಿತ್ತು. ಅದು ಅತ್ಯಂತ, ಅತ್ಯಂತ ಸೂಕ್ತವಾದ ಒಳ್ಳೆಯ ನಿರ್ಧಾರ.

ಅಧ್ಯಕ್ಷರು : ಯಾವುದು?

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಕಂದಾಯ ಇಲಾಖೆಉ ತಾಲ್ಲೂಕು ಪುನರ್ ರಚನೆ ವಿಚಾರ. ಸುಮಾರು 43 ತಾಲ್ಲೂಕುಗಳನ್ನು ಮಾಡಬೇಕೆಂದು ಘೋಷಣೆ ಮಾಡಲಾಯಿತು. ಮಾಡಲಾಯಿತು. ಅದಕ್ಕಾಗಿ 4 ಸಮಿತಿಗಳನ್ನು ಏಕೆ ಮಾಡಬೇಕು ಸರ್? ಸಮಿತಿಗಳ ವರದಿಗಳನ್ನು ನಾವು reject ಮಾಡುವುದಾದರೆ, ಸಮಿತಿಗಳನ್ನು ಏಕೆ ನೇಮಿಸಬೇಕು? ಸಮಿತಿಗಳಿಗೆ ಏಕೆ ಕೋಟ್ಯಾಂತರ ರೂ. ಗಳನ್ನು ಖರ್ಚು ಮಾಡಬೇಕು? ಶ್ರೀ ಎಂ.ಬಿ.ಪ್ರಕಾಶ್ ರವರ ನೇತೃತ್ವದ ಸಮಿತಿ, ಅಂತಿಮ ಸಮಿತಿ. ತುಂಬಾ ಒಳ್ಳೆಯ ವರದಿಯನ್ನು ಕೊಟ್ಟಿತು. ಆಂಧ್ರದಲ್ಲಿ ಒಂದು ತಾಲ್ಲೂಕಿಗೆ 2 ಲಕ್ಷ 30 ಸಾವಿರ ಜನಸಂಖ್ಯೆ ಇದೆ. ನಮ್ಮಲ್ಲಿ 3 ಲಕ್ಷ 60 ಸಾವಿರ ಇದೆ. ಮೊನ್ನೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದನ್ನು ತಾವು ನೋಡಿರಬಹುದು. ಉತ್ತರ ಕರ್ನಾಟಕ ಬೆಳಗಾಂ. ಗುಲ್ಬರ್ಗಾ, ಇನ್ನಿತರ ಜಿಲ್ಲೆಗಳಲ್ಲಿ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಹೋಗಬೇಕಾದರೆ ಸುಮಾರು 160 ಕಿಲೋಮೀಟರ್‌ಗಳಷ್ಟು ಪ್ರಯಾಣಿಸಬೇಕಾಗುತ್ತದೆ. ಈ ದಿಸೆಯಲ್ಲಿ ಆಡಳಿತ ವಿಕೇಂದ್ರೀಕರಣವಾಗಬೇಕು. ಜನರಿಗೆ ಸುಲಭವಾಗಿ ಆಡಳಿತ ತಲುಪಬೇಕೆಂದರೆ, ಸರ್ಕಾರಕ್ಕೆ ಹೊರೆಯಾದರೂ ತೊಂದರೆಯಿಲ್ಲ. ಈ ವಿಷಯವಾಗಿ ಹಿಂದಿನ ಸರ್ಕಾರ ಪ್ರಸ್ತಾವನೆ ಮಂಡಿಸಿತ್ತು. ಅದನ್ನು ತಾವು ಒಪ್ಪಬೇಕು. ಇದರಲ್ಲಿ ರಾಜಕೀಯ ಬೇಡ. ಏಕೆ ರಾಜಕೀಯ

ಬೆರೆಸಬೇಕು? ಅವರು ಮಾಡಿದ್ದನ್ನು ನಾವು ರಿಜೆಕ್ಟ್ ಮಾಡುವುದು, ನಾವು ಮಾಡಿದ್ದನ್ನು ಅವರು ರಿಜೆಕ್ಟ್ ಮಾಡುವುದು! ಇದೆಲ್ಲಾ ಬೇಡ. ನಮ್ಮ ನಾಯಕರಾದ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿ–ಗಳಾಗಿದ್ದ ಕಾಲದಲ್ಲಿ ಪ್ರಸ್ತಾಪಿಸಲ್ಪಟ್ಟಿದ ವಿಷಯ ಇದಾಗಿತ್ತು. ಕೊನೆಗೆ ಅದು ನಿಂತುಹೋಯಿತು. ಮಾನ್ಯ ಕಂದಾಯ ಮಂತ್ರಿಗಳು ಸದನದ ಹೊರಗಿದ್ದಾರೆ. ಅವರು ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಅವರು ಒಪ್ಪಿಕೊಂಡಿದ್ದರೆ ಸಂತೋಷ. ಆಡಳಿತ ವಿಕೇಂದ್ರೀಕರಣಗೊಳ್ಳಲು ಅವರು ಇದನ್ನು ಒಪ್ಪಿಕೊಳ್ಳಬೇಕು. ಕಂದಾಯ ಇಲಾಖೆ ಸುಧಾರಣೆಗೊಂಡಲ್ಲಿ ಎಲ್ಲಾ ಇಲಾಖೆಗಳೂ ಸುಧಾರಣೆಯಾದಂತೆಯೇ. ಇವತ್ತು ಪಿ.ಡಿ.ಓ.ಗಳನ್ನು ತಾವು ಕಾರ್ಯದರ್ಶಿ–ಯೆಂದು ಮಾಡಿರುವುದಲ್ಲದೆ. ತಾಲ್ಲೂಕು ಕಛೇರಿಯಲ್ಲಿ ಗ್ರೇಡ್–1 ಮತ್ತು ಗ್ರೇಡ್–2 ಎಂದು ಎರಡು ಪೋಸ್ಟಿಂಗ್ಸ್ ಮಾಡಿದ್ದೀರಿ. ಆ ಇಬ್ಬರೂ ಅಧಿಕಾರಿಗಳು ನಾ ಹೆಚ್ಚು ನಾ ಹೆಚ್ಚು ಎಂದು ಕಿತ್ತಾಡುತ್ತಿದ್ದಾರೆ. ಇವರಿಬ್ಬರ ಜಗಳದಲ್ಲಿ ಪಂಚಾಯಿತಿಗಳಲ್ಲಿ ಯಾವುದೇ ಕೆಲಸ–ಕಾರ್ಯಗಳಾತ್ತಿಲ್ಲ. ತಾಲ್ಲೂಕು ಪಂಚಾಯಿತಿಗಳಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಅವರನ್ನು ನೇಮಿಸಿದ್ದರೂ ಒಬ್ಬರೂ ಆರ್.ಐ. ಇಲ್ಲ. ನನ್ನ ಕ್ಷೇತ್ರದಲ್ಲಿರುವ ಐದು ಹೋಬಳಿಗಳಿಗೆ ಒಬ್ಬರೇ ಆರ್.ಐ. ಇದ್ದಾರೆ. ಐದು ನಾಡ ಕಚೇರಿಗಳಲ್ಲಿ ಡೆಪ್ಯುಟಿ ತಹಸೀಲ್ದಾರ್ (ಡಿ.ಟಿ.) ಇಲ್ಲ, ಎಸ್.ಡಿ.ಸಿ. ಇಲ್ಲ. ಎಫ್.ಡಿ.ಸಿ. ಇಲ್ಲ, ಗುಮಾಸ್ತರಿಲ್ಲ. ಇಷ್ಟೆಲ್ಲಾ ಕೊರತೆಗಳನ್ನಿಟ್ಟುಕೊಂಡಿದ್ದರೂ ದಕ್ಷ ಆಡಳಿತ ಕೊಡುತ್ತೇವೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ, ತಾವೂ ಹೇಳುತ್ತೀದ್ದೀರಿ. ಹೇಗೆ ದಕ್ಷ ಆಡಳಿತ ನೀಡುತ್ತೀರಿ ಎಂಬುದನ್ನು ಮುಂದಿನ ದಿನಗಳಲ್ಲಿ ನಾವು ನೋಡುತ್ತೇವೆ.

ಇನ್ನು ಕಚೇರಿಗಳಲ್ಲಿ ಕಾಲಮಿತಿ ಅಳವಡಿಸಿಕೊಳ್ಳಬೇಕು. ಇವತ್ತು ಕಚೇರಿಗಳಲ್ಲಿ ಫೈಲ್‌ಗಳು ಅಷ್ಟು ಸುಲಭವಾಗಿ ಮುಂದುವರೆಯುವುದಿಲ್ಲ ಎಂಬುದು ತಮಗೂ ಗೊತ್ತಿದೆ. ಯಾವುದೇ ಸೆಕ್ಷನ್‌ನ ಫೈಲ್‌ಗಳಿರಲಿ, ಕಾಲಮಿತಿ ಎರಡು ದಿವಸ ಇರಬೇಕು ಇಲ್ಲವೇ ಒಂದು ವಾರ ತೆಗೆದುಕೊಳ್ಳಲಿ. ಕಚೇರಿಗಳಲ್ಲಿ ಹೇಳುವವರು. ಕೇಳುವವರು ಯಾರೂ ಇಲ್ಲದಂತಾಗಿದೆ. ಈ ನಿಟ್ಟಿನಲ್ಲಿ

ಆಡಳಿತವನ್ನು ತಾವುಸ್ವೀಡ್ ಆಪ್ ಮಾಡಬೇಕು. ಇವತ್ತು ಕಳಪೆ ಗೊಬ್ಬರದ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಟ್ಟರು. ರಸಗೊಬ್ಬರದ ಮೇಲೆ ಕೇಂದ್ರ ಸರ್ಕಾರವು ಮೂರರಷ್ಟು ದರ ಏರಿಸಿದೆ. ಕಳಪೆ ಮಟ್ಟದ ಆ ಗೊಬ್ಬರ ಕೊಂಡು ತಂದು. ರೈತರು ತಮ್ಮ ಹೊಲ-ಗದ್ದೆಗಳಿಗೆ ಹಾಕಿಕೊಂಡು ನಷ್ಟ ಅನುಭವಿಸಿದರೆ, ಆ ನಷ್ಟ ಭರಿಸಿಕೊಂಡುವವರು ಯಾರು? ನಾನು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಈಗಾಗಲೇ ನನ್ನ ಮತಕ್ಷೇತ್ರದಲ್ಲಿ 460 ಚೀಲಗಳಷ್ಟು ಕಳಪೆ ಗೊಬ್ಬರ ವಿತರಿಸಿದ್ದಾರೆ. ಅಷ್ಟಕ್ಕೂ ಸರ್ಕಾರ ರೈತರಿಗೆ ಪರಿಹಾರ ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಮಾನ್ಯ ಕೃಷಿ ಸಚಿವರು ಉತ್ತರಿಸಬೇಕು.

ಇನ್ನು ರೈತ ಬೆಳೆಯುವ ಬಾಳೆ. ಕಬ್ಬು ಇನ್ನಿತರ ಬೆಳೆಗಳಿರಬಹುದು. ಈ ಬೆಳೆಗಳು ಸುಟ್ಟು ಹೋದರೆ ಪರಿಹಾರ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಪರಿಹಾರವೆಂದು ತಹಸೀಲ್ದಾರ್‌ರವರು 300 ರೂ. ಕೊಟ್ಟರೆ. ಡಿ.ಸಿ.ಯವರು 500 ರೂ. ನೀಡುತ್ತಾರೆ. ಇನ್ನು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದರೆ 1,000 ರೂ. ಕೊಡಬಹುದು. ಒಂದು ಎಕರೆಗೆ ಸುಮಾರ 1,200 ಬಾಳೆಗಿಡಗಳನ್ನು ನೆಡಲಾಗುತ್ತದೆ. ಇತ್ತೀಚೆಗೆ ಆಲೂರು ತಾಲ್ಲೂಕಿನ ಕದಾಳು ಮತ್ತು ಚನ್ನಾಪುರ ಗ್ರಾಮಗಳಲ್ಲಿ ರೈತರು ಚೆನ್ನಾಗಿ ಬೆಳೆದಿದ್ದ ಬಾಳೆ ಗಿಡಗಳೆಲ್ಲವೂ ಸಂಪೂರ್ಣವಾಗಿ ಸುಟ್ಟು ಹೋದವು. ಆದುದರಿಂದ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಹೇಳಿದಂತೆ, ರೈತರು ಬೆಳೆದ ಬೆಳೆಗಳು ಸುಟ್ಟು ಹೋದಾಗ ಸರ್ಕಾರ ಸೂಕ್ತ ದರ ನಿರ್ಧರಿಸಿ ಪರಹಾರ ಒದಗಿಸಿಕೊಡಬೇಕು.

ಇನ್ನು ಬೆಲೆ ಏರಿಕೆ ಕುರಿತಂತೆ ಎಲ್ಲ ಪಕ್ಷಗಳೂ ಚರ್ಚಿಸುತ್ತಿವೆ. ಆದರೆ, ಬಡವರ ಕೈಗೆ ಎಟುಕಲಾರದ ರೀತಿಯಲ್ಲಿ ಜನ ಸಾಮಾನ್ಯರ ದಿನಬಳಕೆ ವಸ್ತುಗಳ ಬೆಲೆಗಳು ಏರಿಯಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು? ಇದರಲ್ಲಿ ಕಾಳಸಂತೆಕೋರಿಗೆ, ದಂಧೆ ಮಾಡುವವರಿಗೆ ಅನುಕೂಲವಾಗುತ್ತಿದೆಯೇ ವಿನಾ ಪರೋಕ್ಷವಾಗಿ ಯಾರಿಗೂ ಅನುಕೂಲವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಬಡವರ ಕೈಗೆಟಕುವ ದರದಲ್ಲಿ ದರ ಇಳಿಸುವ ಕೆಲಸ ಮಾಡಬೇಕು. ಇವತ್ತು ಆಲೂರು, ಹಾಸನ, ಸಕಲೇಶಪುರ ತಾಲ್ಲೂಕುಗಳಲ್ಲಿ ಸುಮಾರು 21 ಹಳ್ಳಿಗಳು ಶೀತಪೀಡಿತ ಪ್ರದೇಶಗಳಾಗಿವೆ. ಈ ಸಂಬಂಧ ಮೈಸೂರು ರೀಜನಲ್ ಕಮಿಷನರ್ ಅವರು ಒಂದು ಸಮಿತಿ ರಚಿಸಿದ್ದಾರೆ. ಸದನದಲ್ಲಿ ಮಾನ್ಯ ಕಂದಾಯ ಮಂತ್ರಿಗಳಿಲ್ಲ.

ಎಷ್ಟು ಅಭಾಸವೆಂದರೆ, ಶೀತಪೀಡಿತ ಪ್ರದೇಶಗಳನ್ನು ಪರಿಶೀಲಿಸಲು ಯಾವ ತಿಂಗಳುಗಳಲ್ಲಿ ಹೋಗಬೇಕು? ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಹೋದರೆ ಶೀತ ಇದೆಯೇ? ಇಲ್ಲವೇ? ಎಂಬುದು ಗೊತ್ತಾಗುತ್ತದೆ. ಆದರೆ, ಅಧಿಕಾರಿಗಳು ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಹೋಗುತ್ತಾರೆ!ಆಗ ಒಣ ಹವೆ ಇದ್ದು, ಎಲ್ಲವೂ ಒಣಗಿ ಹೋಗಿರುತ್ತದೆ. ಆಗ ಅಧಿಕಾರಿಗಳು ಶೀತಪೀಡಿತ ಪ್ರದೇಶ ಇಲ್ಲವೆಂದು ಬರೆದುಕೊಂಡು ಬಂದು ನೀಡಿರುವ ವರದಿ ನಮ್ಮ ಬಳಿ ಇದೆ. ಗೊರೂರು ಕೂಡ ಶೀತಪೀಡಿತ ಪ್ರದೇಶವಾಗಿದ್ದು, ಸುಮಾರು 46 ವರ್ಷಗಳು ಕಳೆದರೂ ಇನ್ನೂ ಮೊದಲ ಹಂತದ ಪರಿಹಾರ ಕೊಟ್ಟಿಲ್ಲ. ಆಲೂರು, ಹಾಸನ ಮತ್ತು ಸಕಲೇಶಪುರ ತಾಲ್ಲೂಕುಗಳ 21 ಶೀತಪೀಡಿತ ಹಳ್ಳಿಗಳಿಗೆ ಹಾಗೂ ಮಾಜಿ ಮುಖ್ಯಮಂತ್ರಿಗಳು ಬಂದಿದ್ದರು. ಅವರೆಲ್ಲರೂ ಬಂದು ಸಹಾಯ ಮಾಡುವುದಾಗಿ ಹೇಳಿ ಹೋದರು. ನಂತರ, ನಮ್ಮ ದುರದೃಷ್ಟವೋ ಏನೋ, ನಮ್ಮ ಸರ್ಕಾರ ಹೋಯಿತು! ಇದಾದ ನಂತರ ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರದಿಂದ ಪ್ರಾಮಾಣಿಕ ಪ್ರಯತ್ನಗಳು ನಡೆಯಲಿಲ್ಲ. ಇವತ್ತು ಹೇಮಾವತಿ, ಯಗಚಿ, ವಾಟೆಹೊಳೆ ವಲಯಗಳಿರಬಹುದು, ರಾಜ್ಯದ ಯಾವುದೇ ಭಾಗದಲ್ಲಾಗಿರಬಹುದು, ತಮ್ಮ ಜಮೀನು ಕಳೆದುಕೊಂಡು ಒಣ ಹುಲ್ಲು ಹಾಕಿಕೊಂಡು ಇಲ್ಲವೇ ಗೋಣಿ ತಾಟುಗಳನ್ನು ಅದರ ಮೇಲೆ ಮಲಗುವ ವ್ಯವಸ್ಥೆ ಇರುವುದರಿಂದ ಸರ್ಕಾರ ಇದರತ್ತ ಗಮನಹರಿದಬೇಕು. ಇನ್ನು ಪುನರ್ವಸತಿ ಗ್ರಾಮಗಳ ಕುರಿತು ಹೇಳುವುದಾದರೆ, ಇವತ್ತು ಅಧಿಕಾರಿಗಳು ಕ್ರಿಯಾ ಯೋಜನೆ ರೂಪಿಸುತ್ತಾರೆ. ಯಾವ ಗ್ರಾಮಕ್ಕೆ ಪುನರ್ವಸತಿ ಕಲ್ಪಿಸಬೇಕೋ, ಅದನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸದೆ ಬಿಟ್ಟುಬಿಡುಯತ್ತಾರೆ. ಕಂಟ್ರಾಕ್ಟರ್ ಮತ್ತು ಇಂಜಿನಿಯರ್‌ಗೆ ಯಾವುದು ಸುಲಭ ಸಾಧ್ಯವಾಗುತ್ತದೋ, ಅದನ್ನು ಮಾತ್ರ ಕ್ರಿಯಾ ಯೋಜನೆಯಲ್ಲಿ ಸೇರಿಸುತ್ತಾರೆ. ಈ ತರಹದ ದಂಧೆ ಕೆಲವೆಡೆ ಜರುಗುತ್ತಿದೆ. ಅತ್ತ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಹೇಳಬಯಸುತ್ತೇನೆ.

ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರ ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದು, ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಏನೇನು ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಾಗಿ ಹೇಳಿದೆಯೋ, ಅವೆಲ್ಲವನ್ನೂ